ಅಪರಂಜಿ

ನವೆಂಬರ್ 98

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಭೂಪಿ

ಕೃಷ್ಣ ಸುಬ್ಬರಾವ್

ರಾಮಮೂರ್ತಿ ತೆಮೆಮನೆ

ವೈ.ಎನ್. ಗುಂಡೂರಾವ್

ಎಚ್. ಗೋಪಾಲಕೃಷ್ಣ

ಗೌತಮ

ಶಿರೀಪ್ ಯಕ್ಕುಂಡಿ

ಶಿಲಾಬಾಲಿಕೆ

ಸುಕೃತ

ಶಿವು

ಎಚ್. ಗೋಪಾಲಕೃಷ್ಣ

ಆನಂದ

ಬೇಲೂರು ರಾಮಮೂರ್ತಿ

ಎಚ್. ಶಿವರಾಂ

ಬಿಡಿ ಪ್ರತಿ: ರೂ. 5.00



ಕೊರವಂಜಿಗೆ ಲಕ್ಷಣ್ ಬರೆದ ವ್ಯಂಗ ಚಿತ್ರ

ಶುಭಾಶಯಗಳೊಂದಿಗೆ

ವಿಜಯಾ ಮತ್ತು ಆನಂದ್ ದೇಸಾಯ್

ಆಸ್ಟಿನ್, ಟೆಕ್ಸಸ್



ಗೌರವ ಸಲಹೆಗಾರರು:
ಶ್ರೀ ಅ. ರಾ. ನೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಆಜೀವ ಚಂದಾ : ರೂ. 500

ವಿಳಾಸ: ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 16 ನವೆಂಬರ್ 98 ಸಂಚಿಕೆ-2

ಅಪರಂಜಿ ಕಿಡಿ	ಪ್ರಕಾಶ್	2
ನಮ್ಮ ನಿಮ್ಮಲ್ಲಿ	ಶಿವಕುಮಾರ್	4
ಟು ವ್ಹೀಲರ್ ಅನುಬಂಧ	ಭೂಷಿ	8
ಬುದ್ಧನ ಸೋಲು	ಕೃಷ್ಣ ಸುಬ್ಬರಾವ್	14
ನಾವು ಕನ್ನಡಿಗರು	ರಾಮಮೂರ್ತಿ ತೆಮೆಮನೆ	17
ಮೇಡ್‌ಫಾರ್ ಈಚ್ ಅದರ್	ವೈ.ಎನ್. ಗುಂಡೂರಾವ್	18
ಸುಪ್ರಭಾತವು ನಿನಗೆ	ಎಚ್. ಗೋಪಾಲಕೃಷ್ಣ	21
ಪುಸ್ತಕೋತ್ಸವ	ಗೌತಮ	23
ಇಂಟರ್ನೆಟ್ ವಿಸ್ಡಮ್	ಶಿರೀಷ್ ಯಕ್ಕುಂಡಿ	26
ಅಪರಂಜಿಯ ಅಂತದೃಷ್ಟಿ	ಶಿಲಾಬಾಲಿಕೆ	27
ಕೃತಿಚೌರ್ಯ ಕಮ್ಮಟ	ಸುಕೃತ	29
ಕಂಪ್ಯೂಟರ್ ಮುಂದೊಂದು ಕನಸು	ಶಿವು	30
ಮಾತುಕತೆ	ಎಚ್. ಗೋಪಾಲಕೃಷ್ಣ	32
ದಕ್ಷಿಣಮುಖಿ	ಆನಂದ	33
ಹೆಂಡದ ಬಾಟಲು	ಬೇಲೂರು ರಾಮಮೂರ್ತಿ	35
ಶ್ರದ್ಧಾಂಜಲಿ		37
ನಿಮ್ಮ ನಮ್ಮಲ್ಲಿ		38
ನಾವು ನಗುವ ಹಾಗೆ	ಎಚ್. ಶಿವರಾಂ	40

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



○ಪ್ರಕಾಶ್

ಹೊಸ ಆಸ್ಪತ್ರೆಗಳಷ್ಟೇ ಸಾಲದು

- ಶೀರ್ಷಿಕೆ

ಹೌದು, ವೈದ್ಯರೂ ಬೇಕು!!

★★★

ವಿದೇಶದಿಂದ ಸಚಿವರು ವಾಪಸು

- ಸುದ್ದಿ

ಈಗ ಎಂ.ಎಲ್.ಎ.ಗಳ ಸರದಿಯೇನು??

★★★

ಪ್ರಧಾನಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ಯಶಸ್ವಿ

- ಪತ್ರಿಕೆ

ಅವರ ದೃಷ್ಟಿಕೋನ ಬದಲಾಗುವುದೆ??

★★★

ನಾಯಕತ್ವ ಬದಲಾವಣೆ ಬಿಕ್ಕಟ್ಟು ಸೃಷ್ಟಿ

- ಸುದ್ದಿ

ಹಳೆಯ ಕಾಯಿಲೆ ಮರುಕಳಿಸಿದಂತಿದೆ!!

★★★

ಕಾಡುಗಳ್ಳರ ವಿರುದ್ಧ ಗೂಂಡಾ ಕಾಯಿದೆ

- ಪತ್ರಿಕೆ

ವೀರಪ್ಪನ್ ಮೀಸೆ ತಿರುವಿ ನಕ್ಕನಂತೆ!!

★★★

ಕೇಂದ್ರದಲ್ಲಿ ಸರ್ಕಾರ; ಕಾಂಗ್ರೆಸ್ ನಿರಾಸಕ್ತಿ
- ಪತ್ರಿಕೆ

ಅಭಾವ ವೈರಾಗ್ಯ??

★★★

ಅರಣ್ಯ - ಲೂಟಿ ಕ್ರಮಕ್ಕೆ ರಾಜ್ಯಪಾಲರ ಸಲಹೆ
- ಪತ್ರಿಕೆ

ಅರಣ್ಯ ರೋಧನ!!

★★★

ಸಿ.ಬಿ.ಟಿ. ಪ್ರಕ್ರಿಯೆ ಮುಕ್ತಾಯ
- ಸುದ್ದಿ

ದೀರ್ಘಪರ್ವ ಮುಗಿದಂತಾಯಿತು!!

★★★

ಕೆ.ಇ.ಬಿ. ಖಾಸಗೀಕರಣಕ್ಕೆ ಹೆಗಡೆ ಸಲಹೆ
- ಪತ್ರಿಕೆ

ಅವರ ಮನೆಯಲ್ಲೂ ದೀಪ ನಂದಿರಬೇಕು!!

★★★

ಚೀಟಿ ವ್ಯವಹಾರ; 40 ಲಕ್ಷ ವಂಚಿಸಿ ದಂಪತಿ ಪರಾರಿ
- ಸುದ್ದಿ

ದಂ ಇರುವ ದಂಪತಿಗಳು!!

★★★

ಹಾಸ್ಯೋತ್ಸವ 98 25-12-1998

ಹೆಚ್.ಎನ್ ಕಲಾಕ್ಷೇತ್ರ, ಜಯನಗರ

ಹಾಸ್ಯಬ್ರಹ್ಮ ಮತ್ತು ಅಪರಂಜಿ ವೇದಿಕೆ

ಸಂಯುಕ್ತವಾಗಿ ಪ್ರಸ್ತುತಪಡಿಸಲಿರುವ

'ರಾಶಿ' - 'ರತ್ನ' ಸ್ಮರಣೆ ಮತ್ತು

'ಹಾಸ್ಯೋತ್ಸವ 98'ರ

ಸಿದ್ಧತೆಗಳು ಭರದಿಂದ ಸಾಗಿವೆ.

ವಿವರಗಳಿಗೆ ಅಪರಂಜಿ ಡಿಸೆಂಬರ್ 98ರ ಸಂಚಿಕೆ ಕಾದಿರಿಸಿ

ನಮ್ಮ ನಿಮ್ಮಲ್ಲಿ

ಅಕ್ಟೋಬರ್ ಸಂಚಿಕೆಯ ಹೊಸ ವಿನ್ಯಾಸವನ್ನು ಅನೇಕರು ಮೆಚ್ಚಿ ಬರೆದಿದ್ದಾರೆ. ಕೆಲವರು ''ಪ್ರತಿ ಪುಟಕ್ಕೂ ಬ್ಲಾಕ್ ಬಾರ್ಡರ್ ಯಾವ ಶೋಕ ಪ್ರದರ್ಶಕ್ಕೆ?'' ಅಂತ ಕೇಳಿರುವುದರಿಂದ ಈ ಸಂಚಿಕೆಯಲ್ಲಿ ಅದನ್ನು ಕೈಬಿಡಲಾಗಿದೆ. ಇನ್ನೊಂದು ವಿಷಯ. ಅನೇಕ ಓದುಗರು ''ಅಪರಂಜಿ ನಮ್ಮ ಮನೆಗೆ ತಪ್ಪದೇ ಬರುತ್ತಿಲ್ಲ. 'ಬಂದಾಳೋ, ಬಾರಳೋ' ಎಂದು ಶಬರಿಯಂತೆ ಅನೇಕಬಾರಿ ದಾರಿ ಕಾದು ಅವಳು ಬಾರದೇ ನಿರಾಸೆಯಿಂದ ಬೇಸತ್ತಿದ್ದೇವೆ. ಇದಕ್ಕೇನು ಪರಿಹಾರ?'' ಅಂತ ಪ್ರಶ್ನಿಸಿದ್ದಾರೆ. ಪತ್ರಿಕೆ ಬಾರದಿರುವುದಕ್ಕೆ ಹಲವಾರು ಕಾರಣಗಳಿರಬಹುದು.

1. ನಮ್ಮಲ್ಲಿರುವ ನಿಮ್ಮ ವಿಳಾಸ ತಪ್ಪಿರಬಹುದು (ವಿಧಿ ವಿಳಾಸ!)

2. ನೀವು ವಿಳಾಸ ಬದಲಿಸಿ ನಮಗೆ ತಿಳಿಸಲು ಮರೆತಿರಬಹುದು.

3. ನಿಮ್ಮ ಬಡಾವಣೆಯ ಅಂಚೆಯವನಿಗೆ ನಿಮ್ಮ ಮೇಲಿನ ಪ್ರೀತಿಗಿಂತ ಅಪರಂಜಿಯ ಮೇಲಣ ಅಭಿಮಾನ ಹೆಚ್ಚಿರಬಹುದು.

4. ನಿಮ್ಮ ನಸೀಬು ಖರಾಬಿರಬಹುದು.

ಮೇಲಿನ ಯಾವುದೇ ಕಾರಣಕ್ಕೆ ನಿಮಗೆ ಸಂಚಿಕೆ ತಲುಪಿಲ್ಲದಿದ್ದರೆ, ಇಂದಿನಿಂದ ಕಳವಳಕ್ಕೆ ಕಾರಣವಿಲ್ಲ. ಅಪರಂಜಿ ಬಳಗದ ಹಲವು ಅಭಿಮಾನಿಗಳು ಸಂಚಿಕೆಯ ಪ್ರತಿಗಳನ್ನು ತಮ್ಮಲ್ಲಿ ದಾಸ್ತಾನಿರಿಸಿಕೊಂಡಿರುತ್ತಾರೆ. ಪತ್ರಿಕೆ ಬಾರದಿದ್ದಾಗ ನೀವು ಅವರನ್ನು ಸಂಪರ್ಕಿಸಿ, ಅಪರಂಜಿಯನ್ನು ಪಡೆಯಬಹುದು. ಅವರುಗಳ ವಿಳಾಸ ಇಂತಿದೆ:

1. ಜಯನಗರ:

ಶ್ರೀಮತಿ ಕಮಲಾ ರಾಮಸ್ವಾಮಿ (ದೂರ (ದೂರು?)ವಾಣಿ: 6649593)

''ಬಕುಳಾಲಯ'' ನಂ. 410, ಮೊದಲನೇ ಲಿಂಕ್ ರಸ್ತೆ, ಮೂರನೇ ಬ್ಲಾಕ್, ಜಯನಗರ, ಬೆಂಗಳೂರು - 560 011.

2. ಮಲ್ಲೇಶ್ವರ:

ಶ್ರೀ ಎ.ಆರ್. ರಾಜಗೋಪಾಲ್ (3347300)

ನಂ. 62 (ಮಹಡಿ) 12ನೇ ಕ್ರಾಸ್, 11ನೇ ಮೇನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003.

3. ಬಸವೇಶ್ವರ ನಗರ:

ಶ್ರೀ ಕೃಷ್ಣಸುಬ್ಬರಾವ್ (3482849)

ನಂ. 10, ಮೊದಲನೇ 'ಜಿ' ಕ್ರಾಸ್, 8ನೇ ಮೇನ್, ಮೂರನೇ ಹಂತ, ನಾಲ್ಕನೇ ಬ್ಲಾಕ್, ಬಸವೇಶ್ವರನಗರ.

4. ವೈಯಾಲೀಕಾವಲ್:

ಶ್ರೀ ಬೇಲೂರು ರಾಮಮೂರ್ತಿ (3360284)

ನಂ. 313/8, ಏನೇ ಮುಖ್ಯರಸ್ತೆ, ವೈಯಾಲೀಕಾವಲ್, ಬೆಂಗಳೂರು.

5. ವಿದ್ಯಾರಣ್ಯಪುರ:

ಶ್ರೀ ಎಚ್. ಗೋಪಾಲಕೃಷ್ಣ (8382726)

ನಂ. 925, ಚೈತ್ರ, 5ನೇ ಬ್ಲಾಕ್, ವಿದ್ಯಾರಣ್ಯಪುರ, ಬೆಂಗಳೂರು - 560 097.

ಹದಿನೈದು ವರ್ಷಗಳ ಕಾಲ ಪತ್ರಿಕೆ ನಡೆಸಿ ಒಂದು ಅತ್ಯಮೂಲ್ಯವಾದ ಪಾಠ ಕಲಿತಿದ್ದೇನೆ. ಅಪರಂಜಿ, ಮುಂದಿನ ದಿನಗಳಲ್ಲಿ ಕೊರವಂಜಿಯಂತೆ ಕಾಡಿನ ದಾರಿ ಹಿಡಿಯದಂತಿರಬೇಕಾದರೆ, ಪತ್ರಿಕೆಗೆ ಒಂದು ಭದ್ರವಾದ ಆರ್ಥಿಕ ಬುನಾದಿ ಒದಗಿಸಬೇಕಾದದ್ದು ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ, ನಮ್ಮ ಸಂಪಾದಕ ವರ್ಗದಲ್ಲಿ ಸುಧೀರ್ಘ ಚರ್ಚೆ ನಡೆಸಿ ಹಲವು ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ. ಮೊದಲನೆಯದಾಗಿ ಪತ್ರಿಕೆಯ ಬೆಲೆ. ಆಜೀವ ಚಂದಾ: 500/- ರೂ, ವಾರ್ಷಿಕ ಚಂದಾ: 60/- ರೂ, ಬಿಡಿಪ್ರತಿ: 5/- ರೂ. ಎಂದು ನಿಗದಿಸಿದ್ದೇವೆ. ಎರಡನೆಯದಾಗಿ ಎಲ್ಲ ಹಾಸ್ಯಾಭಿಮಾನಿಗಳೂ ಸೇರಿ ಚಂದಾ ಸಂಗ್ರಹಣೆಯ ಡ್ರೈವ್ ಒಂದನ್ನು ಕೈಗೊಳ್ಳುವ ನಿರ್ಧಾರ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಎಲ್ಲಾ ಓದುಗರ ಸಹಕಾರ ನಮಗಿದೆ ಎಂಬ ನಂಬಿಕೆ ನಮ್ಮದು. ಈ ಬಾರಿಯ ಹಾಸ್ಯೋತ್ಸವ-98 ರಲ್ಲಿ ಚಂದಾ ಸಂಗ್ರಹಣೆಯ ಜೊತೆಗೆ ಅಪರಂಜಿ ಜನವರಿ ಸಂಚಿಕೆಯನ್ನು ಒಂದು ವಿಶೇಷ ಸಂಚಿಕೆಯನ್ನಾಗಿ ಹೊರತರುತ್ತೀದ್ದೇವೆ. ಸುಮಾರು 160 ಪುಟಗಳ ಈ ಸಂಚಿಕೆ ಹಾಸ್ಯ ಕ್ಷೇತ್ರದಲ್ಲಿ ಖ್ಯಾತನಾಮರನೇಕರ ಬರಹಗಳನ್ನು ಒಳಗೊಂಡಿರುವುದೇ ಅಲ್ಲದೇ, ಅಂತರ್ದೇಶೀಯ ವ್ಯಂಗ್ಯ ಚಿತ್ರಗಳೊಂದಿಗೆ ಅತ್ಯಂತ ಆಕರ್ಷಕವಾಗಿ ಹೊರಬರುವ ನಿರೀಕ್ಷೆಯಿದೆ. ಅಂತೂ ಎಲ್ಲ ಪ್ರಯತ್ನ ಮಾಡಿ ಪತ್ರಿಕೆಗೆ ವ್ಯಾವಹಾರಿಕ ಯಶಸ್ಸನ್ನು ದೊರಕಿಸಿಕೊಡುವ ಉದ್ದೇಶದಿಂದ ನಿಮ್ಮೆಲ್ಲರ ನೆರವನ್ನು ಕೋರುತ್ತಿದ್ದೇವೆ. ಅಪರಂಜಿಯಲ್ಲಿನ ಲೇಖನಗಳು ನಿಮ್ಮ ನಿರೀಕ್ಷೆಯ ಮಟ್ಟ ಮುಟ್ಟಿದರೆ ನಮ್ಮ ಈ ಕಾರ್ಯದಲ್ಲಿ ಯಶಸ್ಸು ಖಂಡಿತ ಎಂಬುದು ನಮ್ಮ ಅನಿಸಿಕೆ.

ಎಲ್ಲ ಓದುಗರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.

ನಿಮ್ಮವ

ಶಿವಕುಮಾರ್

ಅಪರಂಜಿ

ಕಳೆದ ಹದಿನೈದು ವರುಷಗಳಿಂದ ಉತ್ತಮ ಅಭಿರುಚಿಯ, ಪ್ರಬುದ್ಧ ವಿನೋದ ಸಾಹಿತ್ಯವನ್ನು ನಾಡಿನ ಹಾಸ್ಯಪ್ರೇಮಿಗಳಿಗೆ ನೀಡುತ್ತಾ ಬಂದಿರುವ ಮಾಸಿಕ ಅಪರಂಜಿ. ಇಪ್ಪತ್ತೈದು ವರ್ಷಗಳ ಕಾಲ ಕನ್ನಡ ಜನತೆಯನ್ನು ರಂಜಿಸಿದ ಕೊರವಂಜಿ ನಡೆದ ಹಾದಿಯಲ್ಲಿ ನಡೆಯುತ್ತಾ ಬಂದಿರುವ ಈ ಪತ್ರಿಕೆಗೆ ಒಂದು ಸುಭದ್ರವಾದ ಆರ್ಥಿಕ ಬುನಾದಿಯನ್ನು ಒದಗಿಸುವ ಉದ್ದೇಶದಿಂದ ಅಪರಂಜಿಗೆ ಆಜೀವ ಸದಸ್ಯತ್ವವನ್ನು ನೀಡುವಂತೆ ಕನ್ನಡ ಹಾಸ್ಯಾಭಿಮಾನಿಗಳನ್ನು ಕೋರುತ್ತಿದ್ದೇವೆ.

ಚಂದಾ ವಿವರಗಳು ಇಂತಿವೆ:

ಆಜೀವ ಚಂದಾ: 500/- ರೂಗಳು.

ವಾರ್ಷಿಕ ಚಂದಾ: 60/- ರೂಗಳು.

ಆಜೀವ ಚಂದಾ ಹಣವನ್ನು 250/- ರೂಗಳ ಎರಡು ಕಂತುಗಳಲ್ಲಿ ಕೊಡುವ ಸೌಲಭ್ಯವಿದೆ. ಚೆಕ್ಕುಗಳನ್ನು ''ಅಪರಂಜಿ'' ಹೆಸರಿಗೆ ನಮೂದಿಸಬಹುದು. ಚಂದಾದಾರರಿಗೆ, ಪ್ರತಿ ತಿಂಗಳ ಸಂಚಿಕೆಯೇ ಅಲ್ಲದೆ ಪ್ರತಿ ವರ್ಷ ಡಿಸೆಂಬರಿನಲ್ಲಿ ನಡೆಯುವ ಹಾಸ್ಯೋತ್ಸವಕ್ಕೆ ಆದರದ ಆಹ್ವಾನ ಹಾಗೂ ಆ ಸಂದರ್ಭದಲ್ಲಿ ಹೊರಬರುವ ವಿಶೇಷ ಸಂಚಿಕೆ ಉಚಿತವಾಗಿ ದೊರೆಯುತ್ತದೆ. ನಿಮ್ಮ ಸದಸ್ಯತ್ವವನ್ನು ಇದಿರು ನೋಡುವ,

ತಮ್ಮ ವಿಶ್ವಾಸಿ,
ಶಿವಕುಮಾರ್
ಸಂಪಾದಕ

ಸಂಪಾದಕರು
ಅಪರಂಜಿ ಮಾಸಪತ್ರಿಕೆ,
36, 6ನೇ ಮುಖ್ಯರಸ್ತೆ, ಬೆಂಗಳೂರು - 560 003

ಮಾನ್ಯರೇ,

ಈ ಮೂಲಕ ''ಅಪರಂಜಿ''ಗೆ ನನ್ನ ಚಂದಾ ಹಣ (ಆಜೀವ ಚಂದಾ/ ವಾರ್ಷಿಕ ಚಂದಾ) ವನ್ನು ನೀಡುತ್ತಿದ್ದೇನೆ.


ನನ್ನ ವಿಳಾಸ
ಹೀಗಿದೆ...

....

....

ಇತೀ ತಮ್ಮ ವಿಶ್ವಾಸಿ,

(ಸಹಿ)



ಪಪಾಯ, ಗೋಧಿ
ಅನ್ನ ಇವೆರಡನ್ನೇ
ಬಳಸಿ ರುಚಿ
ರುಚಿಯಾಗಿರೋ
ಒಂದೆರಡು ರೆಸಿಪಿ
ಹೇಳ್ರೀ.



ಅರೆ, ಭಿನ್ನಮತೀಯರಿಲ್ದೆ,
ಡೆಮಾಕ್ರಸಿ
ಹೇಗಾಗುತ್ತೇರೀ?



ಹೌದು ಕಣೇ, ನಾನು ಶುದ್ಧ
ಅಪಡ್ಡಾಳ, ಸೋಮಾರಿ,
ನಿಷ್ಪ್ರಯೋಜಕ, ಕ್ರಿಮಿ. ಮದುವೇಗೆ
ಮುಂದೇನೆ ಇದನ್ನ ನಿನಗೆ ತಿಳಿಸದೇ
ಇದ್ದದ್ದು ನನ್ನ ತಪ್ಪು.
ಈಗೇನ್ಮಾಡೂಂತೀಯಾ?

ಟು ವ್ಹೀಲರ್ ಅನುಬಂಧ

- ಭೂಷಿ

ನನಗೂ ಟು ವ್ಹೀಲರ್‌ಗೂ ಏಕೋ ಏನೋ ಎಣ್ಣೆ-ಸೀಗೇಕಾಯಿ ಸಂಬಂಧ ಅಂತ ನನ್ನ ನಂಬಿಕೆ. ನಾನು, ಇದುವರೆವಿಗೂ ಓಡಿಸಿರುವ ಬಗೆ ಬಗೆಯ ಟು ವ್ಹೀಲರ್‌ಗಳಲ್ಲಿ ಯಾವುದೂ ನನಗೆ ಅಷ್ಟಾಗಿ ಆಗಿ ಬಂದಿಲ್ಲ (ಸೈಕಲ್ ಒಂದನ್ನು ಬಿಟ್ಟು). ಏನಾದರೂ ಒಂದು 'ಆಘಾತ' ಅಲ್ಲದೇ ಇದ್ದರೂ ಅಪಘಾತವನ್ನಂತೂ ಖಂಡಿತ ಅನುಭವಿಸಬೇಕಾಗಿ ಬಂದಿದೆ.

ನಾನು ಟು ವ್ಹೀಲರ್ ಕಲಿಯಲು ಷುರು ಮಾಡಿದ್ದೇ ಮಿಲಿಟರಿ ಸೇರಿದ ಮೇಲೆ ಅದೂ ಸಹ ಅಕಾಡಮಿಯಿಂದ ಹೆಗಲಮೇಲೆ ಒಂದು 'ಸ್ಟಾರ್' ಹೊತ್ತು ಕರ್ಕಿಯಲ್ಲಿದ್ದ EME ಸ್ಕೂಲ್ ಸೇರಿದಾಗ. ವಾರಕ್ಕೆ ಎರಡು ಸಲ ಅಂತ ಕಾಣುತ್ತೆ... ಕರ್ಕಿ ಹೊರಗೆ ಮುಂಬಯಿ ರಸ್ತೆಯ ಪಕ್ಕದಲ್ಲಿನ ಬರಡು ಪ್ರದೇಶದಲ್ಲಿ ನಮ್ಮ ಕಲಿಕೆ ನಡೆಯುತ್ತಿತ್ತು. ನಾಲ್ಕು ಚಕ್ರದ ವಾಹನದ ಕಲಿಕೆ ಅಕಾಡಮಿಯಲ್ಲೇ ಅಲ್ಪ, ಸ್ವಲ್ಪ ಆಗಿತ್ತು. ಆದ್ದರಿಂದ ಈಗ ಮೋಟರ್ ಸೈಕಲ್ ನಡೆಸುವ 'ಮೋಹ' ಜಾಸ್ತಿಯಾಗಿತ್ತು.

ಮಿಲಿಟರಿಯಲ್ಲಿ ವಾಹನವನ್ನು ಚಲಾಯಿಸುವುದನ್ನು ಕಲಿಸುವ ವಿಧಾನದ ವೈಖರಿಯೇ ಬೇರೆ ರೀತಿಯದು. ಅಕಾಡಮಿಯಲ್ಲಿದ್ದಾಗ ನಮ್ಮ ಟ್ರೈನಿಂಗ್ ಡೆಹ್ರಾಡೂನ್ ಚಕ್ರೌಥಾ ರಸ್ತೆಯಲ್ಲಿ ನಡೆಯುತ್ತಿತ್ತು. ಗಾಡಿಗೆ ನಾಲ್ಕಾರು ಕೆಡೆಟ್‌ಗಳು, ಒಬ್ಬ ಡ್ರೈವರ್ ಅವನೇ ತರಬೇತಿದಾರ ಕೂಡ. ರಸ್ತೆಯಲ್ಲಿ, ಸ್ವಲ್ಪ ಹೊರಚ್ಚಾದ ಪ್ರದೇಶ ಬಂದ ಕೂಡಲೇ ಡ್ರೈವರ್ ವಾಹನ ನಿಲ್ಲಿಸಿ ಸ್ಟಿಯರಿಂಗ್ ಅನ್ನು ಒಬ್ಬ ಕೆಡೆಟ್‌ಗೆ ಬಿಟ್ಟುಕೊಟ್ಟು, ತಾನು ಪಕ್ಕದಲ್ಲಿ ಕೂತು, ''ಹ್ಲುಂ, ಚಲಾವ್'' ಅಂತ ಹುಕುಂ ಕೊಡುತ್ತಿದ್ದ! ನಮ್ಮಲ್ಲಿ ಬಹಳಷ್ಟು ಜನಕ್ಕೆ ಅವನು 'ಚಲಾವ್' ಅಂದ ಕೂಡಲೇ ಏನು ಮಾಡಬೇಕು ಅನ್ನುವುದು ತಿಳಿದಿರುತ್ತಿರಲಿಲ್ಲ. ''ಕೈಸೇ ಉಸ್ತಾದ್?''... ಅಂತ ನಮ್ಮ ಪ್ರಶ್ನೆ. ಅದಕ್ಕೆ ಅವನು ''ಅರೇ! ಇತನಾಭೀ ಆಫೀಸರ್ ಬನ್ನೇ ನಹೀಜಾನ್ತೇಹೈ ಆಪ್‌ಲೋಗ್?... ಬಡೇ ಚಲೇ ಆಯೇ'' ಅಂತ ಷುರುಮಾಡಿ, ಕಂಟ್ರೋಲ್‌ಗಳನ್ನೆಲ್ಲಾ ತೋರಿಸಿ ''ಇಗ್ನಿಷನ್ ಲಗಾವ್, ಕ್ಲಚ್‌ದಬಾವ್, ನ್ಯೂಟ್ರಲ್ ಕರೋ, ಎಂಜಿನ್ ಇಸ್ಟಾರ್ಟ್‌ಕರೋ (ಅಥವಾ 'ಸಟಾರ್ಟ್ ಕರೋ'... ಅವನು ಯಾವ ಪ್ರದೇಶದವನು ಅನ್ನುವುದರ ಮೇಲೆ ಉಚ್ಚಾರಣೆ ನಿರ್ಧಾರವಾಗಿತ್ತು!). ಗೇರ್‌ಲಗಾವ್, ಆಕ್ಸಲರೇಟರ್ ದೋ, ಕ್ಲಚ್ ಛೋಡೋ, ಗಾಡಿ ಚಲಾವ್'' ಅಂತ ಒದರಿ ಕೈಕಟ್ಟಿ ಕೂತುಕೊಳ್ಳುತ್ತಿದ್ದ! ಯದ್ವಾ,

ತದ್ವಾ ಚಲಾಯಿಸಿ, ಅಂತೂ, ಇಂತೂ ಸ್ವಲ್ಪವಾದರೂ ಕಲಿತೆವು, ಅನ್ನಿ... ಎಷ್ಟೇ ಆಗಲಿ ನಾಲ್ಕು ಚಕ್ರ ನೋಡಿ! 'ಚಲಾವ್' ಅಂದ ತಕ್ಷಣ ಗಾಡಿ ಮುಂದಕ್ಕೆ ಚಿಮ್ಮಿದರೂ, ವಾಲಿ ಕೆಳಗೆ ಬೀಳುವ ಭಯ ಇರಲಿಲ್ಲ... ಘಾಯ ಆಗುವ ಪ್ರಮೇಯ ಇರಲಿಲ್ಲ... ಅದೂ ಅಲ್ಲದೇ ಆಘಾತ ತಪ್ಪಿಸಲು ಡ್ರೈವರ್ ಉಸ್ತಾದ್ ಪಕ್ಕದಲ್ಲೇ ಕೂತಿರುತ್ತಿದ್ದ... ಹೀಗಾಗಿ, ನಾಲ್ಕು ಚಕ್ರದ ವಾಹನದ ಚಲಾವಣೆ ಅಷ್ಟಾಗಿ ಪ್ರಯಾಸಕರವೆಂದು ತೋರಲಿಲ್ಲ. ಆದರೆ... ಮೋಟರ್‌ಸೈಕಲ್ ಕಥೆಯೇ ಬೇರೆ!...

ಕರ್ಕಿಯಲ್ಲಿ ನಮಗೆ ಟು ವ್ಹೀಲರ್ ಕಲಿಕೆ ಒಬ್ಬ JCO ನಡೆಸುತ್ತಿದ್ದ. ಒಂದು 5HP ಮೋಟರ್‌ಸೈಕಲ್ ಕೊಟ್ಟು, ಸೀಟ್ ಮೇಲೆ ಕೂಡಿಸಿದ ಮೇಲೆ ''ಕ್ಲಚ್ ದಬಾವ್, ಗೇರ್‌ಮೆ ಡಾಲೋ, ಕ್ಲಚ್ ಛೋಡ್ತೇ ಹುವೇ ಆಕ್ಸಲರೇಟರ್ ದೋ''... ಅಂತ ಹೇಳಿ ಮುಂದಕ್ಕೆ ತಳ್ಳುತ್ತಿದ್ದ. ಆದರೆ, 'ಚಲೋ' ಅಂತ ತಳ್ಳಿದಾಗ, ಆಕ್ಸಲರೇಟರ್ ಕೊಟ್ಟ ಕೂಡಲೇ, ಮೋಟರ್‌ಸೈಕಲ್ ಬೆದರಿದ ಕುದುರೆಯಂತೆ ಚಿಮ್ಮಿ ಚಾಲಕನನ್ನು ಎಷ್ಟೋ ಸಲ, ನೆಲಕ್ಕೆ ಕುಕ್ಕಿದ್ದುಂಟು!

ಸ್ವಲ್ಪ ಅಭ್ಯಾಸವಾದ ಮೇಲೆ, ಅಲ್ಲೇ ಸುತ್ತ ಹೊಡೆಯುತ್ತಿದ್ದಾಗ, ''ಗೇರ್ ಛೇಂಜ್ ಕರೋ... "S" ಟರ್ನ್‌ಕರೋ... figure of eight ಕರೋ..'' ಎಂತೆಲ್ಲಾ ಹುಕುಂ ಹೊರಡಿಸುತ್ತಿದ್ದ. ಆಗಾಗ್ಗೆ ಆಯ ತಪ್ಪಿ ಬೀಳುವುದು ಸರ್ವೇಸಾಮಾನ್ಯ. ನಾನಂತೂ ಒಂದು ಸಲ ಹಾಗೇ ನಡೆಸಿ ಅಭ್ಯಾಸವಾದಮೇಲೆ ''ಪರವಾಗಿಲ್ಲ, ನಾನೂ ಸಹ 'ಗ್ರಾನ್‌ಪ್ರೀ' (grand prix) ರೈಡರ್ ಆಗಿಬಿಟ್ಟೆ'' ಅಂತ. ಆಕ್ಸಲರೇಟರ್ ತಿರುಗಿಸಿ, ಮುಖಕ್ಕೆ ಬಡಿಯುತ್ತಿದ್ದ ಥಣ್ಣನೆಯ ಗಾಳಿಯಿಂದ ಪುಳಕಿತನಾಗಿ ರಭಸದಿಂದ ಚಲಾಯಿಸಲು ಷುರು ಮಾಡಿದೆ! ವೇಗ ತಗ್ಗಿಸದೇ ಟರ್ನಿಂಗ್ ತೆಗೆದುಕೊಳ್ಳಲು ಷುರುಮಾಡಿದೆ! ಕೇಳಬೇಕೆ! ಒಂದು ಟರ್ನಿಂಗ್ ಅನ್ನು ವೇಗವಾಗಿ ತೆಗೆದುಕೊಂಡಾಗ ನಿಯಂತ್ರಣ ತಪ್ಪಿ, ಮೋಟರ್ ಸೈಕಲ್ ನನ್ನನ್ನು ದೂರಕ್ಕೆ ಎಸೆಯಿತು! JCO ನೋಡಿ ನಕ್ಕನೇ ಹೊರತು ಸಹಾಯಕ್ಕೆ ಬರಲಿ ಲ್ಲ... ''ಉಠೋ... ಉಠೋ... ಫಿರ್ಸೆ ಷುರುಕರೋ...'' ಅಂತ ಹುರಿದುಂಬಿಸಿ, ಓಡಿಸುತ್ತಿದ್ದ! ಕಡೆಗೂ ಮಿಲಿಟರಿ ಡ್ರೈವಿಂಗ್ ಲೈಸೆನ್ಸ್ ದಕ್ಕಿಸಿಕೊಂಡೆ.

EME ಸ್ಕೂಲ್ ಬಿಟ್ಟು, ಅಲ್ಲೇ ಕರ್ಕಿಯಲ್ಲೇ ಇದ್ದ ಬೇಸ್ ವರ್ಕ್‌ಷಾಪಿಗೆ ಮೊದಲನೇ ಪೋಸ್ಟಿಂಗ್ ಬಂತು. ನನ್ನನ್ನು Special Vehicles Overhall Sectionಗೆ ಆಫೀಸರ್ ಇನ್‌ಛಾರ್ಜ್ ಮಾಡಿದರು. ಆದರೂ, ಮೋಟರ್‌ಸೈಕಲ್ ಮೋಹ ಕಳೆದುಕೊಳ್ಳಲಾರದೇ, ಬೇರೆ ಸೆಕ್ಷನ್‌ನಲ್ಲಿ ಓವರ್‌ಹಾಲ್ ಆಗುತ್ತಿದ್ದ

ಮೋಟರ್ ಸೈಕಲ್‌ಗಳ ಮೇಲೆ ದೃಷ್ಟಿ ಹಾಯಿಸಿದೆ. ಆ ಸೆಕ್ಷನ್ ಇನ್‌ಛಾರ್ಜ್ ಒಬ್ಬ ಸಿವಿಲಿಯನ್ ಆಫ಼ೀಸರ್ ಮಧ್ಯ ವಯಸ್ಕರು... ಅನುಭವಿ... ಕನ್ನಡದವರೇ ಆಗಿದ್ದರು. ಅವರ ಕೃಪೆಯಿಂದ ಮೋಟರ್ ಸೈಕಲ್‌ಗಳನ್ನೂ 'ಟೆಸ್ಟ್' ಮಾಡಲು ಷುರು ಮಾಡಿದೆ. ವರ್ಕ್‌ಷಾಪ್ ಒಳಗೇ ಸಾಕಷ್ಟು ಸುತ್ತು ರಸ್ತೆ ಇತ್ತು. ಸ್ವಲ್ಪ ಏರುಪೇರುಗಳೂ ಕೂಡ.

ಒಂದು ಸಲ, ನಾನು ಬೆಂಗಳೂರಿಗೆ ರಜದ ಮೇಲೆ ಬರುವ ಹಿಂದಿನ ದಿನ 'ಟೆಸ್ಟ್' ಮಾಡಲು ಹೊರಟೆ. ಎರಡು ಮೂರು ಸುತ್ತು ಸುತ್ತಿದ ಮೇಲೆ ಪಿತ್ಥ ನೆತ್ತಿಗೆ ಏರಿತು ಅಂತ ಕಾಣುತ್ತೆ. ನನ್ನ ಸಮಾನ ಯಾರೂ ಇಲ್ಲ ಅಂತ ವೇಗ ಹೆಚ್ಚಿಸಿದೆ... ಏರು, ಪೇರು ಬಂದಾಗ ನಿಯಂತ್ರಣ ತಪ್ಪಿತು. ಮೋಟರ್‌ಸೈಕಲ್ 'ಇದೇ ಸಮಯ' ಅಂತ ಕುದುರೆ ಸೆಟೆದು ನಿಂತು ಮೈ ಒದರುವಂತೆ ನನ್ನನ್ನು ದೂರಕ್ಕೆ ಒಗೆಯಿತು! ಕಮಾಂಡೆಂಟ್‌ಗೆ ತಿಳಿದರೆ ರಜಕ್ಕೆ ಎಲ್ಲಿ ಸಂಚಕಾರ ಬರುತ್ತೋ ಅಂತ ಹೆದರಿ. ಮೋಟರ್‌ಸೈಕಲ್ ಸೆಕ್ಷನ್ ಸೇರಿಸಿ ಸೆಕ್ಷನ್ ಆಫ಼ೀಸರಿಂದ ''ಪರವಾಗಿಲ್ಲ... ನಾನು ಪುನಃ ಸರಿ ಮಾಡಿಸುತ್ತೇನೆ, ನೀನು ಹೋಗು'' ಅಂತ ಆಶ್ವಾಸನೆ ಪಡೆದು ಹೊರಟೆ. ಬೆಂಗಳೂರಿನಲ್ಲಿ ನನ್ನ ರಜಾ ದಿನಗಳ ಒಂದು ವಾರವನ್ನು ಕುಂಟುತ್ತಾ, ಮೂಗೇಟುಗಳಿಂದ ನರಳುತ್ತಾ ಕಳೆದೆ!

☆☆☆

ಇಂಗ್ಲೆಂಡಿನಲ್ಲಿ ಟ್ರೈನಿಂಗ್ ಮುಗಿಸಿ ಬೊಂಬಾಯಿಗೆ ಬಂದಿದ್ದೆ. (ಅಪರಂಜಿ ನವೆಂಬರ್ 97ರ ಸಂಚಿಕೆ) ಕಮಾಂಡಿಂಗ್ ಆಫ಼ೀಸರ್ ಕುರ್ಚಿಯನ್ನು ಎರಡು ತಿಂಗಳು ಅಲಂಕರಿಸಿ, ಒಬ್ಬ ಲೆಫ್ಟಿನೆಂಟ್ ಕರ್ನಲ್‌ನ ಅಧಿಕಾರದ ಸವಿಯನ್ನು ಸವಿದು, ಮತ್ತೆ ಗಗನದಿಂದ ಭುವಿಗೆ ಇಳಿದು, ಸ್ವಸ್ಥಾನಕ್ಕೆ (ಅಂದರೆ ಕ್ಯಾಪ್ಟನ್ ಜಾಗಕ್ಕೆ) ಮರಳಿದೆ.

ಒಂದು ದಿನ, ಕೆಲಸದ ಮೇಲೆ ಸಿರ್‍ರಿಯಲ್ಲಿದ್ದ ಆರ್ಡಿನೆನ್ಸ್ ಡಿಪೋವಿಗೆ ಮೋಟರ್‌ಸೈಕಲ್ ಮೇಲೆ ಹೊರಟೆ... ಆಗಿನ ಕಾಲದಲ್ಲಿ ನಮ್ಮ ಕಮಾಂಡಿಂಗ್ ಆಫ಼ೀಸರ್‌ಗೂ ಸಹ ಕಾರ್‌ನ ಸೌಕರ್ಯ ಇರಲಿಲ್ಲ... ಇನ್ನು ನನ್ನಂಥವನಿಗೆ ಏನು ತಾನೇ ಇದ್ದೀತು?... ಮೋಟರ್ ಸೈಕಲ್ ಸಹ ಕಮಾಂಡಿಂಗ್ ಆಫೀಸರ್‌ನ ಸ್ಪೆಷಲ್ ಪರ್ಮಿಷನ್ ಇಂದ ಸಿಕ್ಕಿತ್ತು... ಪಿಲಿಯನ್ ಮೇಲೆ ಒಬ್ಬ JCOನ (ಅವನು ರೇಡಿಯೋ ರಿಪೇರಿ ಪರಿಣಿತ... ರೇಡಾರ್ ರಿಪೇರಿ ತರಬೇತಿಗಾಗಿ ಇಂಗ್ಲೆಂಡಿಗೆ ಹೋಗಲು ಆಯ್ಕೆ ಆಗಿದ್ದ) ಕೂಡಿಸಿಕೊಂಡು ಹೊರಟೆ.

ಡಾಕ್‌ಯಾರ್ಡ್ ರೋಡ್ ಮೂಲಕ ಹೋಗುತ್ತಿದೆ. ವಾಹನ ಸಂಚಾರ ಜಾಸ್ತಿ ಇತ್ತು... ಎರಡು ಲೇನ್ ಒಂದು ದಿಕ್ಕಿನಲ್ಲಿ ಎರಡು ಲೇನ್ ಮರುದಿಕ್ಕಿನಲ್ಲಿ...

ಬೊಂಬಾಯಿನಲ್ಲಿ 'ಲೇನ್ ಡಿಸಿಪ್ಲಿನ್' ಎಲ್ಲರೂ ಪಾಲಿಸುತ್ತಿದ್ದ ಕಾಲ... ನಾನು fast ಲೇನ್‌ನಲ್ಲಿ ಹೋಗುತ್ತದೆ. ಇದ್ದಕ್ಕಿದ್ದಂತೆ ಎದುರಿನ "fast" ಲೇನ್‌ನಲ್ಲಿ ಬರುತ್ತಿದ್ದ ಒಂದು ಟ್ಯಾಕ್ಸಿ, ಲೇನ್ ಡಿಸಿಪ್ಲಿನ್ ಉಲ್ಲಂಘಿಸಿ ನನ್ನ ಲೇನ್‌ಗೆ ನುಗ್ಗಿತು. ಅದರ ವೇಗ ಜಾಸ್ತಿಯೇ ಇತ್ತು ನನ್ನ ಎಡಪಕ್ಕಕ್ಕೆ ಬೇರೆ ವಾಹನಗಳು ಚಲಿಸುತ್ತಿದ್ದುದರಿಂದ ಅಷ್ಟಾಗಿ ಜಾಗ ಸಿಗಲಿಲ್ಲ... ಸರಿ... ಟ್ಯಾಕ್ಸಿ ಬಂದದ್ದೇ ನನ್ನ ಬಲ ಹ್ಯಾಂಡಲ್‌ಬಾರ್‌ಗೆ ಹೊಡೆಯಿತು. ನಾನು ಸಹಜ ಪ್ರವೃತ್ತಿಯಿಂದ (instinctive ಆಗಿ) ಬ್ರೇಕ್ ಹಾಕಿದೆ ಅಂತ ಕಾಣುತ್ತೆ. ಹ್ಯಾಂಡಲ್ ಮೇಲಿಂದ ಮುಂದಕ್ಕೆ 'ಡೈವ್' ಮಾಡಿ ರಸ್ತೆಗೆ ಬಿದ್ದೆ. ಅದೃಷ್ಟವಶಾತ್ ಯಾವ ವಾಹನದ ಕೆಳಗೂ ಬರಲಿಲ್ಲ... ಒಂದೆರಡು ಘಳಿಗೆ ಜ್ಞಾನ ತಪ್ಪಿತ್ತೇನೋ... ಎಚ್ಚೆತ್ತಾಗ ರಸ್ತೆ ಪಕ್ಕದ foot-path ಮೇಲೆ ಕೂತಿದ್ದೆ. ಸುತ್ತಲೂ ಜನ ಇದ್ದರು... ತುಟಿಯಿಂದ ರಕ್ತ ಬರುತ್ತಿತ್ತು (ಹಲ್ಲು ಮುರಿದಿದೆ ಅಂತ ಆಮೇಲೆ ತಿಳಿಯಿತು) ರಸ್ತೆ ಕಡೆ ಕಣ್ಣು ಹಾಯಿಸಿದೆ... ಮೋಟರ್‌ಸೈಕಲ್ ಟ್ಯಾಕ್ಸಿ ಮಡ್‌ಗಾರ್ಡ್‌ಗೆ ಸಿಕ್ಕಿಕೊಂಡಿತ್ತು JCO ಸಹ foot path ಮೇಲೆ ಕುಳಿತಿದ್ದ... ಅವನ ಬಲಗಾಲು fracture ಅನ್ನುವುದು ಆಮೇಲೆ ತಿಳಿಯಿತು... ಇನ್ನೇನು?... 8- 10 ದಿನ ಆಸ್ಪತ್ರೆ ವಾಸದ ನಂತರ ಮನೆಗೆ ಬಂದೆ.:. JCO ಪ್ಲಾಸ್ಟರ್ ಸಮೇತ ಹೊರಬಿದ್ದ ಅವನ ಇಂಗ್ಲೆಂಡ್ ಪ್ರಯಾಣ ರದ್ದಾಯಿತು!

★★★

ಕಾಲ ಉರುಳಿತು... ಮೋಟರ್‌ಸೈಕಲ್ 'ಮೋಹ' ಕಮ್ಮಿ ಆಗಿತ್ತು. ಜೀಪ್ ಜೋಂಗಾಗಳಿಗೆ ಬಡ್ತಿ ಸಿಕ್ಕಿತ್ತು. ಕಾರ್ ಸಹ ಕೊಂಡಿದ್ದೆ... ಆದರೂ...

ನಾನು, ಚೀನಿಯರ ಜೊತೆ 'ಸೆಣಸಿ' ಡೆಲ್ಲಿಯಲ್ಲಿ ಒಂದು ಟೆನ್ಯೂರ್ ಮುಗಿಸಿ ಮತ್ತೆ ಎರಡನೆಯ ಟೆನ್ಯೂರಗೆ ಬಂದಿದ್ದೆ (ಅಪರಂಜಿ ಆಗಸ್ಟ್-98 ಸಂಚಿಕೆ ನೋಡಿ) ಕಾರ್ ಇತ್ತು. ಪೆಟ್ರೋಲ್ ಇದ್ದುದರಲ್ಲಿ ಅಗ್ಗವಾಗೇ ಇತ್ತು ಆದರೂ, ಎಲ್ಲರಂತೆ, ಆಫೀಸ್ ಉಪಯೋಗಕ್ಕೆ ಅಂತ ಒಂದು ವೆಸ್ಪ ಸ್ಕೂಟರ್ ಕೊಂಡೆ... ಸಂಸಾರ ಮೈಸೂರಿಗೆ ಹೋಗಿತ್ತು... ನಾನು NDCಯಲ್ಲಿ ಕೋರ್ಸ್ ಮಾಡುತ್ತಿದ್ದೆ... ಒಂದು ದಿನ...

ಸಂಜೆ ಸ್ಕೂಟರ್ ಮೇಲೆ, ಹತ್ತಿರದಲ್ಲೇ ಇದ್ದ ನಮ್ಮ ಕ್ಲಬ್‌ಗೆ ಈಜಾವುದಕ್ಕೆ ಹೋಗಿದ್ದೆ. ವಾಪಸ್ ಬರುವಾಗ ಸ್ವಲ್ಪ ಕತ್ತಲೆ ಶುರು ಆಗಿತ್ತು. ನಾನಾಗ SP ಮಾರ್ಗ್‌ನಲ್ಲಿ ಒಂದು ಫ್ಲಾಟ್‌ನಲ್ಲಿದ್ದೆ. ಕ್ಲಬ್‌ನಿಂದ ಬರುವಾಗ ಫ್ಲಾಟ್‌ಗೆ ಬಲಕ್ಕೆ ತಿರುಗಬೇಕಾಗಿತ್ತು. ಎದುರಿನಿಂದ ಸಾಲಾಗಿ ವಾಹನಗಳು ಬರುತ್ತಿದ್ದವು. ಎಲ್ಲಾ ಹೆಡ್‌ಲೈಟ್ ಹಾಕಿದ್ದವು... ನಾನು ಸ್ಕೂಟರ್ ವೇಗ ತಗ್ಗಿಸಿ ಹೆಡ್‌ಲೈಟ್‌ಗಳು

ಹೋಗುವವರೆಗೂ ಕಾದು, ಕಡೆಯ ವಾಹನ ಹೋದಮೇಲೆ ಬಲಕ್ಕೆ ತಿರುಗಿದೆ... ಅಷ್ಟೇ... ಎಚ್ಚರವಾದಾಗ, ಯಥಾ ಪ್ರಕಾರ foot path ಮೇಲೆ ಕೂತಿದ್ದೆ. ಎದುರಿನ foot path ಮೇಲೆ ಇಬ್ಬರು, ಮೆಕ್ಯಾನಿಕ್‌ಗಳಂತೆ ಇದ್ದ ಹುಡುಗರು... ರಸ್ತೆಯಲ್ಲಿ ಅವರ ಹಳೇ ಸ್ಕೂಟರ್... ನನ್ನ ಕಡೆ ನನ್ನ ಹೊಸಾ ಸ್ಕೂಟರ್... ಹುಡುಗರ ಮೇಲೆ ಜನಗಳು ಬೈಗಳ ಮಳೆ ಸುರಿಸುತ್ತಿದ್ದರು! ಇಬ್ಬರೂ ಲೈಟ್ ಇಲ್ಲದ, ಬ್ರೇಕ್ ಸರಿ ಇಲ್ಲದ, ರಿಪೇರಿಗೆಂದು ಬಂದಿದ್ದ ಸ್ಕೂಟರ್ ಮೇಲೆ ಜೋರಾಗಿ ಬರುತ್ತಿದ್ದರಂತೆ ನಾನು ಬಲಕ್ಕೆ ತಿರುಗುತ್ತಿದ್ದುದನ್ನು ನೋಡಿದರೂ, ಸ್ಕೂಟರ್ ನಿಯಂತ್ರಿಸದೆ ಡಿಕ್ಕಿ ಹೊಡೆದರಂತೆ... ಏನಾದರೇನಂತೆ? ಮತ್ತೆ ಮೂಗೇಟುಗಳು!

ಏಕೋ ಟು ವ್ಹೀಲರ್‌ಗೂ, ನನಗೂ ನೆಂಟಸ್ತನ ಆಗಿ ಬರುವುದಿಲ್ಲ ಅಂತ ನಿರ್ಧಾರ ಮಾಡಿ, ಸ್ಕೂಟರ್ ಮಾರಿಬಿಟ್ಟೆ!... ಮೋಹ ಗೆದ್ದೆ ಅಂದುಕೊಂಡೆ!...

★★★

ನಾನು ರಿಟೈರ್ ಆಗಿ ಬೆಂಗಳೂರಿಗೆ ಬಂದ ಹೊಸದು, ಸಂಬಳ ಪೆನ್‌ಷನ್‌ಗೆ ಬದಲಾಗಿದ್ದುದರಿಂದ 'ಉಳಿತಾಯ ಯೋಜನೆ' ಅಂತ ಒಂದು ಮೋಪೆಡ್ ಕೊಂಡೆ... ಮನೆಯವರೆಲ್ಲಾ ಮೈಸೂರಿಗೆ ಹೋಗಿದ್ದರು ಮದುವೆಗೇ ಅಂತ... ನಾನೂ ಮಾರನೆಯ ದಿನ ಹೊರಡುವುದರಲ್ಲಿದ್ದೆ...

ಆ ಸಂಜೆ, ಹತ್ತಿರವೇ ಇದ್ದ ಮಗಳ ಮನೆಗೆ ಹೊರಟೆ... ಕತ್ತಲೆ ಸಮಯ... ನಮ್ಮ ಏರಿಯಾದಲ್ಲಿ ಕನ್‌ಸ್ಟ್ರಕ್ಷನ್ ಸಮಯ ಸಹ... ರಸ್ತೆ ಪಕ್ಕದಲ್ಲಿ ಅಡ್ಡಾದಿಡ್ಡಿ ಹಾಕಿದ್ದ ಕಲ್ಲು ಚಪ್ಪಡಿಗಳು ಸರಿಯಾಗಿ ಕಾಣಿಸಲಿಲ್ಲ... ಬಡಿದೆ; ಬಿದ್ದೆ. ಚಪ್ಪಡಿ ಮಾಲೀಕರು ತಿಳಿದವರೇ, ಓಡಿ ಬಂದರು ಉಪಚರಿಸಿದರು... ಡ್ರಿಂಕ್ಸ್‌ಕೊಟ್ಟು ಕಳುಹಿಸಿದರು!.. ತರಚಲು ಪರಚಲು ಗಾಯಗಳು... ಹಾಗೇ ಮೈಸೂರಿಗೆ ಹೊರಟೆ! ಸಾಕಪ್ಪಾ... ಇನ್ನು ಮೇಲೆ ಟು ವ್ಹೀಲರ್ ಸಹವಾಸ ಬೇಡವೇ ಬೇಡ ಅಂತ ಮನಸ್ಸು ಮಾಡಿದೆ.

ಈಗಲೂ ಮೋಹ ಆಗಾಗ್ಗೆ ಮರಳುತ್ತೆ. ಆದರೆ ಸಾಕಷ್ಟು ತಲೆ ತಗುಲಿದೆ ತಕ್ಷಣ ಗೀತೋಪದೇಶ ನೆನಪಾಗುತ್ತೆ... 'ಧ್ಯಾಯತೋ ವಿಷಯಾನ್ ಪುಂಸಃ ಸಂಘಸ್ತೇಷೋಪಜಾಯತೇ... ನಾಲ್ಕು ಸಾಲುಗಳ ಈ ಎರಡು ಶ್ಲೋಕಗಳನ್ನು ಜ್ಞಾಪಿಸಿಕೊಂಡು ಟು ವ್ಹೀಲರ್ 'ಸಂಘ' ತ್ಯಜಿಸುತ್ತೇನೆ ಆದರೂ... ಒಂದೊಂದು ಸ್ವಲ್ಪ when you can't resist temptation yield to it. ಅಂತ ಮೊಪೆಡ್‌ನೋ, ಕೈನೆಟಿಕ್‌ನೋ ಓಡಿಸಿ ಮೋಹ ಬಿಡಿಸಿಕೊಳ್ಳುತ್ತೇನೆ.

ಒಟ್ಟಿನಲ್ಲಿ ನನ್ನ ಮಟ್ಟಿಗೆ ಹೇಳುವುದಾದರೆ, ದ್ವಿಚಕ್ರಕ್ಕಿಂತ ದ್ವಿಪಾದವೇ ಶ್ರೇಷ್ಠ! ಒಪ್ಪುತ್ತೀರಾ?!

★★★


ಸಮಯವಿದು ಕನ್ನಡ ಸ್ಮರಣೆಗೆ!!
ಚಿತ್ತೂರು!
ಕವಲೊಡೆದ ಕನ್ನಡ ಕುಲ!
ಕಲಬೆರಕೆ ಕನ್ನಡಿಗರು
ಗಡಿ ಕನ್ನಡಿಗರು
ಗಡಿಬಿಡಿ ಕನ್ನಡಿಗರು
ಒಳನಾಡ ಕನ್ನಡಿಗರು
N.R.I. ಕನ್ನಡಿಗರು
ಹೊರನಾಡ ಕನ್ನಡಿಗರು
ನಮ್ಮ ಧರ್ಮದ ಬಗ್ಗೆ ಕನ್ನಡ ಗ್ರಂಥ ಬಂದಿದೆ. ಪುರಸ್ಕಾರ, ತಿರಸ್ಕಾರ, ಬಹಿಷ್ಕಾರವೆ?
ಶ್ರೀನಿವಾಸಲು
1998

ಬುದ್ಧನ ಸೋಲು

– ಕೃಷ್ಣ ಸುಬ್ಬರಾವ್

ಸೋಲು ಎನ್ನುವುದು ಸರ್ವವ್ಯಾಪಿ, ಯಾರನ್ನೂ ಬಿಡುವುದಿಲ್ಲ. ಯಮಧರ್ಮರಾಯನೇ ಸಾವಿತ್ರಿ ಅಂತಹ ಸಾಧಾರಣ ಸ್ತ್ರೀ ಮುಂದೆ ಸೋತು ಶರಣಾಗತನಾಗಿ ಯಮಪಾಶವನ್ನು ಸಡಿಲಗೊಳಿಸಿ ಕೊಟ್ಟ ಸಾವನ್ನು ವಾಪಸ್ಸು ಪಡೆದು ಹಿಂತಿರುಗುತ್ತಾನೆ. ಬುದ್ಧ ಸರ್ವತ್ಯಾಗಿ ಆಗಿ ಜ್ಞಾನೋದಯ ಪಡೆದು ತನ್ನ ಬುದ್ಧಿವಂತಿಕೆಯನ್ನು ಪ್ರಪಂಚದಲ್ಲೇ ಪಸರಿಸಿದ. ಆದರೆ ಬುದ್ಧ ಸೋತ ಸಮಾಚಾರ ಯಾರೂ ಪ್ರಚಾರ ಮಾಡಿಲ್ಲ. ಗುಟ್ಟಾಗಿ ಉಳಿದಿದೆ. ಆದರೆ ಈಗ ಕಾಲ ಪಕ್ವವಾಗಿದೆ ಅಂತ ಹೇಳಬಹುದು.

ಸಾವಿಲ್ಲದ ಮನೆಯಿಂದ ಸಾಸುವೆ ಕಾಳನ್ನು ಬುದ್ಧ ತರಹೇಳಿದ್ದು ಗೌತಮಿ ಮನೆಯಿಂದ ಮನೆಗೆ ಮಗುವಿನ ಪ್ರಾಣಕ್ಕೋಸ್ಕರ ಅಲೆದು ಅಲೆದು ಸುಸ್ತಾಗಿ ಸಾವು ಅನಿವಾರ್ಯವೆಂಬ ಸತ್ಯ ಅರಿವಾಗಿ ಹೊರಟು ಹೋಗುವುದು ಕಿಸಾ ಗೌತಮಿಯಲ್ಲಿ ಕೇಳಿದ್ದೇವೆ. ಬುದ್ಧ ಈಗಿನ ಕಾಲದಲ್ಲಿ ಈ ರೀತಿ ಹೇಳಿದ್ದರೆ ಅವನು ಪ್ರಪಂಚದಲ್ಲಿ ಅತ್ಯಂತ ಘೋರ ಅಪರಾಧವಾದ ಮಹಿಳೆಯ ಶೋಷಣೆಗೆ ಒಳಗಾಗುತ್ತಿದ್ದ. ಒಬ್ಬ ಅಮಾಯಕ ಹೆಣ್ಣು ಅದರಲ್ಲೂ ಒಂದು ಮಗುವನ್ನು ಕಳೆದುಕೊಂಡು ಸಹಾಯಕ್ಕಾಗಿ ಬಂದರೆ ಸತ್ಯವನ್ನು ಸುತ್ತಿ ಬಳಸಿ ಹೇಳಿ ಅವಳನ್ನು ಎಲ್ಲಾ ಕಡೆ ಅಲೆಸಿ ನೋಯಿಸಿ ಕಡೆಗೆ ಮಗುವನ್ನೂ ಬದುಕಿಸದೆ the greatest exploitation of the womanhood ಮಾಡಿದ. ಅದಕ್ಕೆ ಬದಲಾಗಿ ಸಾವು ಎಲ್ಲರ ಮನೆಯಲ್ಲೂ ಇದ್ದಿದ್ದೆ ಎಂದು ಅರ್ಥವಾಗುವ ಹಾಗೆ ಹೇಳುವ ಬುದ್ಧಿವಂತಿಕೆ ಇರಲಿಲ್ಲವೆ ಬುದ್ಧನಿಗೆ ಎಂಬ ಪ್ರಶ್ನೆ ಹಾಗೆ ಉಳಿದಿದೆ.

ಅನುಮಾನ ಪರಿಹಾರವಾಗದ ಮತ್ತೊಂದು ಪ್ರಶ್ನೆ. ಎಲ್ಲಾ ಬಿಟ್ಟು ಸಾಸುವೆಯನ್ನೇ ಏಕೆ ಕೇಳಿದ? ಇದರ ಬಗ್ಗೆ ಅನೇಕ ಸಾಧುಗಳನ್ನು, ಸಾತ್ವಿಕರನ್ನು ಸಾರ್ವಜನಿಕರನ್ನು ಕೇಳಿಕೊಂಡು ಬಂದೆ. ಯಾರಿಂದಲೂ ಸಮರ್ಪಕವಾದ ಉತ್ತರ ಸಿಕ್ಕಿಲ್ಲ. ಮನೆಯಲ್ಲಿ ಏನಿಲ್ಲದಿದ್ದರೂ ಸಾಸುವೆ ಇದ್ದೆ ಇರುತ್ತೆ ಹಾಗೆ ಸಾವು ಕೂಡ ಎಲ್ಲರ ಮನೆಯಲ್ಲೂ ಇದ್ದೇ ಇರುತ್ತೆ ಎಂಬ ಉತ್ತರವನ್ನು ಪ್ರಮುಖವಾಗಿ ಎಲ್ಲಾ ಹೇಳಿದರು. ನನ್ನನ್ನು ಕಾಡುತ್ತಿರುವ ಪ್ರಶ್ನೆ ಸಾಸುವೆ ಹಾಗೆ ಮನೆಯಲ್ಲಿ ಉಪ್ಪು ಏಕೆ ಕೇಳಬಾರದಾಗಿತ್ತು ಅದನ್ನು ತರಲು ಹೇಳಬಾರದಿತ್ತು? ಪ್ರಾಣಕ್ಕೋಸ್ಕರ ''ಸಾವಿಲ್ಲದಮನೆಯ ಸಾಸುವೆ ತಾ'' ಎನ್ನುವಂತೆ 'ಮುಪ್ಪಿಲ್ಲದ ಮನೆಯ ಉಪ್ಪು ತಾ' ಎಂದು ಹೇಳಬಹುದಿತ್ತು ಎಂಬುದು ನನ್ನ ವಾದ. ನನ್ನ ಸ್ನೇಹಿತನ ಮುಂದೆ ಈ

ಸಾವು ಮತ್ತು ಸಾಸುವೆ ಬಗ್ಗೆ ಹೇಳುತ್ತಿದ್ದಾಗ ರಾಮಣ್ಣ ಹೇಳಿದ ''ಗೌತಮಿಗೆ ಸಾವಿನ ಬಗ್ಗೆ ಇಷ್ಟು ನಿಖರವಾಗಿ ಹೇಳಿದರೂ ಇನ್ನೂ ಅನೇಕರು ಬುದ್ಧನ ಹತ್ತಿರ ಹೆಣಗಳನ್ನು ಕೊಂಡ್ಯೆದು ಬದುಕಿಸು'' ಎಂದು ಅಂಗಲಾಚುತ್ತಿದ್ದರಂತೆ ಬುದ್ಧ ಬಂದವರಿಗೆಲ್ಲಾ ಹೇಳಿದ್ದೇ ಹೇಳಿದ ''ಸಾವಿಲ್ಲದ ಮನೆಯ ಸಾಸುವೆ ತಾ'' ಒಬ್ಬಳು ಹೀಗೆ ಮನೆಯಿಂದ ಮನೆಗೆ ಹೋಗುತ್ತಾ ''ನಿಮ್ಮನೆಯಲ್ಲಿ ಸಾಸುವೆ ಇದೆಯೆ?'' ಎಂದು ಕೇಳಿದ ತಕ್ಷಣ ಪ್ರತಿಯೊಬ್ಬರು ಬೊಗಸೆಯಲ್ಲಿ ಸಾಸುವೆ ಭಿಕ್ಷೆಯನ್ನು ಕೊಡಲು ಮುಂದಾದರು. ತಕ್ಷಣ Stay order! ನಿಮ್ಮ ಮನೆಯಲ್ಲಿ ಯಾವುದಾದರೂ ಸಾವಾಗಿದ್ದರೆ ನೀವು ಸಾಸುವೆ ಭಿಕ್ಷೆ ನೀಡಲು ಅರ್ಹರಲ್ಲ'' ಎಂದು ಹೇಳಿ ಮುಂದಿನ ಮನೆಗೆ ಹೋಗುತ್ತಿದ್ದಳು. ಅವಳಿಗೆ ಅಕಸ್ಮಾತ್ ಅಶ್ವತ್ಥಾಮನ ಮನೆ ಸಿಕ್ಕಿತು. ಅಲ್ಲಿ ಪ್ರತಿ ಮನೆಯನ್ನು ಕೇಳುವಂತೆ ಸಾಸುವೆ ಕೇಳಲಾಗಿ ''ನಮ್ಮನೆಯಲ್ಲಿ ಸಾಸುವೆ ಇಲ್ಲ, ಏಕೆ ಬೇಕಾಗಿತ್ತು?'' ಎಂದು ಕೇಳಿದನಂತೆ. ''ಸಾವು?'' ಎಂದು ಕೇಳಿದಾಗ ''ಅದೂ ಇಲ್ಲ ನನಗೆ' ಎಂದು ಬೇಜಾರಿನಿಂದ ಹೇಳಿದನಂತೆ. 'ಚಿರಂಜೀವಿ' ಎಂಬ ಶಾಪವಿದೆ ನನಗೆ ಸಾಸುವೆಯಿಂದ ಆ ಶಾಪ ವಿಮುಕ್ತಿಯಾಗುವ ಹಾಗಿದ್ದರೆ ನೀವು ಕೇಳಿದಷ್ಟು ಸಾಸುವೆ ಕೊಡುತ್ತಿದ್ದೆ ಆದರೇನು ಮಾಡಲಿ ಮನೇಲಿ ಸಾಸುವೆಯೇ ಇಲ್ವಲ್ಲ ಅಂದ. ಈ ವಿಪರ್ಯಾಸದಿಂದ ತತ್ತರಿಸಿದ ಹೆಣ ಹೊತ್ತ ಹೆಣ್ಣು ''ಪಕ್ಕದ ಮನೆಯಲ್ಲಿ ತಕ್ಷಣ ಸಾಲ ಪಡೆದಾದರೂ ಸಾಸುವೆ ನನಗೆ ಕೊಡು. ನನ್ನ ಈ ಸತ್ತ ಮಗುವನ್ನು ಬದುಕಿಸಿಕೊಳ್ಳುವೆ'' ಎಂದಳು.

ಬುದ್ಧನ ಬಳಿ ಸಾವಿರ ಸಾಸುವೆ ಕಾಳನ್ನು ಕಾಲಿಗೆ ಹಾಕಿ ''ನಿನ್ನ ಮಾತನ್ನು ನಡೆಸಿಕೊಡು, ಅಶ್ವತ್ಥಾಮ ಎಂಬಾತನ ಮನೆಯಿಂದ ತಂದಿದ್ದೇನೆ. ಅವನಿಗೆ ಸಾವಿಲ್ಲವಂತೆ ಅವನು ಸಾವಿನ ಭಿಕ್ಷೆ ಬೇಡಲು ನಿನ್ನ ಬಳಿ ಬಂದರೂ ಬರಬಹುದು'' ಅಂದಳು ಬುದ್ಧನಿಗೆ ಎರಡನೆ ಭಾರಿಗೆ ಜ್ಞಾನೋದಯವಾಯ್ತು! ಅಶ್ವತ್ಥಾಮನ ವಿಚಾರ ತಲೆಗೆ ಹೊಳೆದಿರಲಿಲ್ಲ. ದೊಡ್ಡ ಸಮಸ್ಯೆಯಲ್ಲಿ ಸಿಲುಕಿಕೊಂಡ ಆದರೆ ಬೀದಿ ಬೀದಿಯಲ್ಲಿ ಅಲೆಯುತ್ತಿದ್ದ ಬುದ್ಧನ ಶಿಷ್ಯರ ಪೈಕಿ ಒಬ್ಬ ಕಿವಿಯಲ್ಲಿ ಏನೊ ಗುಟ್ಟು ಹೇಳಿದ. ಬುದ್ಧ ಪ್ರಸನ್ನನಾದ ''ನೋಡಮ್ಮ ನಾನು ಹೇಳಿದ್ದು ಸಾವಿಲ್ಲದ ಮನೆಯ ಸಾಸುವೆಯನ್ನು ತಾ ಎಂದು ಆದರೆ ಸಾವಿಲ್ಲದ ಮನೆಯ ಸಾಲದ ಸಾಸುವೆ ಅಲ್ಲ'' ಕೊಟ್ಟಮಾತಿಗೆ ತಪ್ಪಿದ ರಾಜಕಾರಣಿ ತರಹ ಟೆಕ್ನಿಕಲ್ ಫಾಲ್ಟ್ ತೋರಿಸುತ್ತಿದ್ದಾರೆ ಅದು ಶುದ್ಧ ಮೋಸ, ಶುದ್ಧೋಧನನದು ಅನಿಸಿದರೂ ಏನೂ ಮಾಡದೆ ಹೊರಟು ಹೋದಳಂತೆ. ಅಂತೂ ಬೀಸೊ ದೊಣ್ಣೆ ತಪ್ಪಿಸಿಕೊಂಡ ಬುದ್ಧ. ಮುಂದಿನ ದಿನಗಳ ಬಗ್ಗೆ ಚಿಂತೆಯಾಯ್ತು...

''ಮುಂದೇನಾಯಿತು? ಎಂದು ಕುತೂಹಲದಿಂದ ರಾಮಣ್ಣನ್ನು ಕೇಳಿದರೆ ''ನನಗೂ ಗೊತ್ತಿಲ್ಲ'' ಎಂದು ನುಣುಚಿಕೊಂಡ. ''ಅಂತೂ ಸಾವು, ಸಾಸುವೆ ಹಾಗೂ ಸಾಲ ಯಾರನ್ನೂ ಬಿಡುವುದಿಲ್ಲ ಎಂಬ ಸತ್ಯಾಂಶ ಸಾರಿದ ಬುದ್ಧನಿಗೆ ಅಶ್ವತ್ಥಾಮ ಎದುರಾಗಬಾದಿತ್ತು'' ಎಂದೆ.

ರಾಮಣ್ಣನ ತಲೆಯಲ್ಲಿ ಏನೋ ಮಿಂಚು ಹೊಳಿದಿರಬೇಕು ''ಅಲ್ವಯ್ಯ ಇವತ್ತಿನ ಪೇಪರು ಇವತ್ತು ಮಾತ್ರ ಯಾಕೆ, ಹಲವು ತಿಂಗಳಿಂದ ಯಾವುದಾದರೂ ಒಂದು ದಿನ ಪೇಪರ್ ಓದಿದ್ಯಾ?'' ಅಂತ ಕೇಳಿದ.

''ಏನೋ, ನನ್ನನ್ನು ಅವಮಾನ ಪಡಿಸುವುದಕ್ಕೆ ಒಂದು ಮಿತಿ ಇರಬೇಡವೆ? ನಾನು ಪೇಪರ್ ಓದೋದಿಲ್ಲವೆ?' ಕೇಳಿದೆ

''ಹಾಗಾದರೆ ಸತತವಾಗಿ ಬರುತ್ತಿರುವ ಒಂದು ವಿಷಯ ಹೇಳು''

''ಅದೇ ಜಯಲಲಿತ ಕೇಂದ್ರ ಸರ್ಕಾರಕ್ಕಾಗಿ ಕೊಟ್ಟ ಬೆಂಬಲ...''

''ಅದಲ್ಲ, ಇನ್ನಾವ ಪ್ರಮುಖ ವಿಷಯ?''

''ಕ್ಲಿಂಟನ್ ಲೀಲೆ!''

''ಅದೂ ಅಲ್ಲ, ಅವೆಲ್ಲ, ಸಾಧಾರಣ ವಿಷಯ, ಅದಕ್ಕಿಂತಲೂ ಮುಖ್ಯವಾದದ್ದು.

''ಗೊತ್ತಿಲ್ಲಪ್ಪ'' ನಿಜವಾದ ಉತ್ತರ ಕೇಳಲು ಕಾತುರನಾಗಿ ಬೇಗ ತಪ್ಪೊಪ್ಪಿದೆ.

''ಹಾಗ್ ಬಾ ದಾರಿಗೆ ಬುದ್ಧ ಸಾವಿಲ್ಲದ ಮನೆಯಿಂದ ಸಾಸುವೆ ಕೇಳಿದ. ಆದರೆ ಈಗ ಸಾಸುವೆಯಿಂದಲೇ ಸಾವು. ಸಾಸುವೆ ಎಣ್ಣೆ ಬ್ಯಾನ್ ಆಗುತ್ತಿದೆ. ಇಷ್ಟೊಂದು ಸಾವು ಆಗುತ್ತಿದೆ ಈಗ ಪಾಪ ಬುದ್ಧ ಬದುಕಿದ್ದರೆ ಇನ್ನೇನು ಸಮಸ್ಯೆ ಎದುರಿಸುತ್ತಿದ್ದನೋ?''

''ಹೌದಯ್ಯ History not only repeats but also it reverses so many events ಕಣೊ'' ಎಂದು ಹೇಳುತ್ತಿದ್ದಾಗ ನಮ್ಮ ಮುಂದೆ ವಿಜಯ ಉಪ್ಪಿಟ್ಟು ತಂದಿಟ್ಟಳು ''ಇವತ್ತಿನ ಟಾಪಿಕ್ ಏನು?'' ಕೇಳಿದಳು.

ತಕ್ಷಣ ರಾಮಣ್ಣ ''ಈಗ ಬುದ್ಧ ಇದ್ದಿದ್ದರೆ Amendment ಮಾಡ್ತಿದ್ದ ಉಪ್ಪಿಟ್ಟು ಮಾಡದ ಮನೆಯಿಂದ ಸಾಸುವೆ ತಾ ಎಂದು. ಉಪ್ಪಿಟ್ಟು ಸರ್ವವ್ಯಾಪಿಯಾದರೂ ಸಾಸುವೆ ಎಲ್ಲಿಂದ ತರೋದು? ಸಾಸುವೆಗೆ ಸಾವು ಬರುತ್ತಿದೆಯಲ್ಲಾ....? ವಿಜಯಳಿಗೆ ಮಾತುಗಳು ಅಸಂಬದ್ಧವೆನಿಸಿದ್ದು ಸ್ಪಷ್ಟವಾಯಿತು. ಆದರೂ ಕಾಫಿ ಬಂತು.

☆☆☆

"ನಾವು ಕನ್ನಡಿಗರು"

ರಾಮಮೂರ್ತಿ ತೆಮೆಮನೆ

ಕನ್ನಡಿಗರು, ನಾವು
ನಾವು ಕನ್ನಡಿಗರು
ಕನ್ನಡಿಗರುS ನಾವು
ಅಚ್ಚ ಕನ್ನಡಿಗರು

ಅಪ್ಪ-ಅಮ್ಮಾ ಎನಲು
ತಪ್ಪು ತಪ್ಪೆನ್ನುವೆವು
ಮಮ್ಮಿ-ಡ್ಯಾಡಿಗಳಾಗಿ
ಹೆಮ್ಮೆಯಲಿ ಬೀಗುವೆವು।

ಕನ್ನಡದ ಮಾತೆಮಗೆ
ಗೌರವಕೆ ಬಲು ಕಡಿಮೆ
ಕಲಬೆರಕೆ ಪರಭಾಷೆ
ತಿಣುಕುವುದೆ ನಮ್ಮ ಗರಿಮೆ।

ಕಲಿಕೆಯಲಿ ಮಾಧ್ಯಮಕೆ
ಕನ್ನಡವು ಮೈಲಿಗೆಯು
ಕಚೇರಿಯಲಿ ಕನ್ನಡವ!?
ದೂರವೇ ಇಟ್ಟಿಹೆವು।

ಕನ್ನಡದ ಪುಸ್ತಕವು
ಕೊಂಡು ಓದಲು ಅಲ್ಲ
ಅನುದಿನದ ವ್ಯವಹಾರ
ಕನ್ನಡದಿ ತರವಲ್ಲ।

ಅನುಮಾನಕೆಡೆಯಿಲ್ಲ
'ಕನ್ನಡಿಗ'ರೇ ನಾವಹುದು
ಹೇಗೆಂದು ಕೇಳುವಿರೊ
ಗಹನ ಕಾರಣವಿಹುದು।

ವ್ಯಾನಿಟಿ ಬ್ಯಾಗಿನಲಿ
ಪ್ಯಾಂಟುಗಳ ಜೇಬಿನಲಿ
ತಪ್ಪದೇ 'ಕನ್ನಡಿ'ಯ
ಇಟ್ಟು ಕೊಳ್ಳುವ ನಾವು
'ಕನ್ನಡಿ'ಗರಲ್ಲದೆ ಮತ್ತೇನು ಹೇಳಿ?

ಕನ್ನಡಿಗರು ನಾವು
ನಾವು ಕನ್ನಡಿಗರು
ಕನ್ನಡಿಗರು ನಾವು
ಅಚ್ಚ ಕನ್ನಡಿಗರು

ಮೇಡ್ ಫಾರ್ ಈಚ್ ಅದರ್

-ವೈ.ಎನ್. ಗುಂಡೂರಾವ್

ಬೆಳಿಗ್ಗೆಯಿಂದ ಪತ್ರಿಕೆ ಓದಲೂ ಸಹ ಬಿಡುವಿಲ್ಲದೆ ರಾತ್ರಿ ಮಲಗುವ ಮುಂಚೆ, ಕೊಂಚ ಪತ್ರಿಕೆ ನೋಡಿ ಮಲಗೋಣವೆಂದು ಪತ್ರಿಕೆ ಹಿಡಿದು ಕುಳಿತಾಗ, ಪಕ್ಕದಲ್ಲಿ ಬಂದು ಕುಳಿತ ರಜನಿ, ''ರೀ... ಪಕ್ಕದಮನೆಗೆ ಬಾಡಿಗೆಗೆ ಬಂದಿರುವ ಜೋಡಿ ನೋಡಿದ್ರಾ?'' ಎಂದಳು.

''ಇಲ್ಲಾ ಸೂರ್ಯ ಹುಟ್ಟೋದಕ್ಕೆ ಮುಂಚೆ ಮನೆಬಿಟ್ರೆ, ಸಂಜೆ ಪಶ್ಚಿಮದಲ್ಲಿ ಮುಳುಗಿದ ಮೇಲೆ ಅಲ್ವಾ ನಾನು ಮನೆ ತಲುಪೋದು. ಇನ್ನು ''ಪಕ್ಕದ ಮನೆ ಜೋಡಿ ಹೇಗಿದ್ದಾರೆ, ಎಲ್ಲಿಂದ ಬಂದ್ರು, ಎಲ್ಲಿಗೆ ಹೋಗ್ತಾರೆ ಅಂತಾ ನನಗೇನಮ್ಮ ಗೊತ್ತಾಗೋದು'' ಎಂದೆ.

''ನೀವು ಫ್ಯಾಕ್ಟರಿಗೆ ಹೊರಡುವ ಸಮಯಕ್ಕೆ ಸರಿಯಾಗಿ ಬಾಗಿಲಿಗೆ ರಂಗೋಲಿ ಬಿಡಲು ಅವಳೂ ಎದ್ದಿರ್ತಾಳೆ. ಆಗಲಾದರು ನೀವು ನೋಡಿಲ್ವೇನ್ರೀ, ಅದ್ಹೇಗೆ ಅವಳು ನಿಮ್ಮ ಕಣ್ಣು ತಪ್ಪಿಸಿಕೊಳ್ಳೋಕೆ ಸಾಧ್ಯ?'' ಎಂದು ನಾನು ಅವಳನ್ನು ನೋಡೇ ನೋಡಿರ್ತೀನಿ ಎನ್ನುವ ಗುಮಾನಿಯ ಜೊತೆಗೆ ತನ್ನ ಗೂಢಚಾರಿಣಿ ಬುದ್ಧಿಯನ್ನು ತೋರಿಸಿದಳು.

ಇಲ್ಲ ಮರಾಯ್ತಿ, ನಾನು ಹೊರಡೋ ಆತುರದಲ್ಲಿ ಮನೆ ಬಾಗಿಲಿಗೆ ಯಾರ್‍ಯಾರು ರಂಗೋಲಿ ಬಿಡ್ತಾರೆ ಅಂತ ನೋಡ್ತಾ ನಿಲ್ಲೋಕ್ಕಾದ್ರೂ ಸಮಯವಿರುತ್ತಾ ಹೇಳು? ಹೀಗೆ ನಿಂತ್ರೆ, ಫ್ಯಾಕ್ಟರಿಯ ಬಸ್ಸು ನನಗಾಗಿ ಕಾಯುತ್ತಾ? ''ಅಂದ್ಹಾಗೆ, ... ಅದೇ, ಸಣ್ಣಗೆ, ಬಿಳಿ ಜಿರಳೆ ತರಹಾ ಇದ್ದಾಳಲ್ಲ... ಅವಳಾ?''

''ಹ್ಞಾಂ! ನೋಡಿದ್ರಾ, ನೋಡೆ ಇಲ್ಲಾಂತ ಸುಮ್ನೆ ಸುಳ್ಳು ಹೇಳ್ತೀರಲ್ಲ''

''ಸರಿ, ನೋಡಿದೆ ಅಂತಲೇ ಇಟ್ಟುಕೋ, ಏನು ವಿಷ್ಯ?''

''ಅವಳ ಗಂಡನನ್ನು ನೋಡಿದ್ದೀರಾ?''

''ಇಲ್ಲಪ್ಪ''

''ಇವಳು ಸಣ್ಣಗೆ ಚಂದನದ ಬೊಂಬೆಯಂತೆ ಇದ್ರೆ, ಆತನನ್ನು ನೋಡಬೇಕ್ರೀ... ಎಂಥಾ ಜೋಡಿ ಅಂತೀರಾ? ಮೇಡ್ ಫಾರ್ ಈಚ್ ಅದರ್....''

''ಅದೇ ನಾನೂ, ನೀನೂ ಇರೋ ತರಹ. ಮದುವೆಯಾದಾಗ ಎಲ್ರೂ ನಮ್ಮಿಬ್ಬರನ್ನ ನೋಡಿ ಅಂತಿದ್ರಲ್ಲ...''

''ಬಿಡ್ರಿ ನಾನೇನು ದಪ್ಪ, ಎಲ್ಲೋ ಒಂದು ರೌಂಡ್ ಜಾಸ್ತಿಯಾಗಿದ್ದೇನಪ್ಪ ಅಷ್ಟೆ'' ಎಂದು ತುಟಿ ಕೊಂಕಿಸಿದಳು.

ಆತನೂ ''ಸಣ್ಣಗೆ, ಬೆಳ್ಳಗೆ...'' ಅಂತ ನಾನನ್ನುತ್ತಿರುವಾಗ

''ನಾಳೆ ಭಾನುವಾರ ಅಲ್ವಾ, ತೋರಿಸ್ತೇನೆ'' ಎಂದು ಹೇಳಿ ಮಲಗಿದಳು.

''ರೀ, ಬೇಗ ಬನ್ನಿ'' ಎಂದು ಬೆಳಿಗ್ಗೆ ಬಾಗಿಲ ಹತ್ತಿರ ರಂಗೋಲಿ ಹಾಕುತ್ತಿದ್ದವಳು ಕರೆದಳು, ಬೆಳಗಾಗೇಳುತ್ತಿದ್ದಂತೆ.

ಹೊರಗೆ ಹೋಗಿ ನೋಡುವುದಕ್ಕೂ, ಪಕ್ಕದ ಮನೆಯಾತ ಗೇಟಿನಾಚೆ ಬರುವುದಕ್ಕೂ ಸರಿಹೋಯ್ತು. ಕರ್ರಗೆ, ದೊಡ್ಡ ಹೊಟ್ಟೆ, ಭೀಮಾಕಾರದ ದೇಹ ಹೊತ್ತವನು ಮೆಲ್ಲಗೆ ಗೇಟು ದಾಟಿ ಹೊರಗೆ ನಡೆದನು.

''ಯಾರೆ ಅದು?'' ಎಂದೆ

''ಅದೇರಿ... ಅವಳ ಗಂಡ...!''

''ಅರೆ ರಾಮ! ಏನು ಜೋಡಿ? ಹೇಳಿ ಮಾಡಿಸಿದ್ದು ಕಣೇ! ಅದು ಹೇಗೆ ಆಕೆ ಈತನನ್ನು ಒಪ್ಪಿಕೊಂಡಳು'' ಎಂದೆ.

''ಅದೇರೀ ನನಗೂ ಬಂದಿರೋ ಸಂಶಯ. ಸಮಯ ಸಿಕ್ಕಾಗ ವಿಚಾರಿಸಬೇಕು'' ಎಂದಳು.

ಹೀಗೆ ಎಂಟು ದಿವಸ ಕಳೆದೇ ಹೋಯಿತು. ನಂತರ ಒಂದು ದಿನ ರಜನಿ, ಪಕ್ಕದ ಮನೆಯ ಜೋಡಿಯ ಬಗ್ಗೆ ತಾನು ಸಂಗ್ರಹಿಸಿದ್ದ ವಿಷಯ ಬಿತ್ತರಿಸಿದಳು.

''ನೋಡ್ರಿ ಆಕೆ ಎಷ್ಟು ಒಳ್ಳೆಯವಳು ಅಂತೀರಾ, ಮೊನ್ನೆ ತಾನೇ ಮಾತನಾಡಿಸಿಕೊಂಡು ಬಂದೆ, ಹಾಗಲಕಾಯಿ ಗೊಜ್ಜು ಕೊಟ್ಲು. ಚೆನ್ನಾಗಿದೆ ಅಂತಾ ನೀವು ಮೂರು ಮೂರು ಬಾರಿ ಹಾಕಿಸಿಕೊಳ್ಳಲಿಲ್ವಾ? ಅದು ಆಕೇನೇ ಮಾಡಿದ್ದು. ಅಡಿಗೆ ಎಲ್ಲಾ ಚೆನ್ನಾಗಿ ಮಾಡ್ತಾಳೆರೀ, ಆದರೆ ಆ ಗಂಡು ಪ್ರಾಣಿಗೆ ಹೇಗೆ ಮಾಡಿ ಹಾಕಿದರೂ ಅಡಿಗೆ ಚೆನ್ನಾಗಿಲ್ಲಾಂತ ಬೈತಾನಂತೆ.''

''ಈಕೆಗೆ ನೆರೆ-ಹೊರೆ; ಜನ-ತನ; ಬಂಧು-ಬಳಗ ಅಂದ್ರೆ ತುಂಬಾ ಇಷ್ಟವಂತೆ. ಆದ್ರೆ ಆತನಿಗೆ ಜನ ದೂರವಂತೆ. ಮನೇಲಿದ್ರೂ ಅಷ್ಟೆ ಯಾವುದೋ ಪುಸ್ತಕ ಹಿಡಿದು ಮೂಲೇಲಿ ಕೂರ್‍ತಾನಂತೆ. ಸಿನಿಮಾಗೆ ಹೋಗೋಣ ಅಂದ್ರೆ, ಪಕ್ಕದ ಮನೆಯವರ ಜೊತೆ ಹೋಗು ಅಂತಾನಂತೆ, ಹೋಟೆಲಿಗೆ ಹೋಗೋಣ ಅಂದ್ರೆ ಮನೇಲಿ ಮಾಡ್ಕೊಂಡು ತಿನ್ನು'' ಅಂತಾನಂತೆ.

ಮೊನ್ನೆ ಹತ್ತಿರದ ಸಂಬಂಧಿಕರ ಮಗುವಿನ ನಾಮಕರಣಕ್ಕೆ ಕರೆದ್ದಿರಂತೆ, ಈಕೆ ಮಗೂಗೆ ಅಂತಾ ಅದೇನೋ ಬೆಳ್ಳಿಯದು ಉಡುಗೊರೆ ಕೊಟ್ಲಂತೆ, ಮನೆಗೆ ಹೋದ ನಂತರ ಬಾಯಿಗೆ ಬಂದ್ಹಂಗೆ ಬೈದನಂತೆ.

''ನಂಗೆ ಹೋಗೋಕೆ ಇಷ್ಟವಿರಲಿಲ್ಲ. ನಿನ್ನ ಬಲವಂತಕ್ಕೆ ಬಂದೆ. ಆದ್ರೆ ಏನಾದರೊಂದು ಓದಿಸೋದುಬಿಟ್ಟು ಬೆಳ್ಳಿಯದನ್ನೇಕೆ ಓದಿಸಿದೆ ಎಂದು ಬೈದನಂತೆ. ಈಕೆಗೂ-ಆತನಿಗೂ ಒಂಚೂರು ಹೊಂದಾಣಿಕೆ ಇಲ್ವಂತೆ. ಇವಳ ಅಪ್ಪ ಆತನ ತಂದೆಯ ಆಸ್ತಿ ನೋಡಿ ಮದುವೆ ಮಾಡಿದರಂತೆ. ಆದರೆ ಅಪ್ಪನ ಕೂಡಾ ಜಗಳವಾಡಿಕೊಂಡು ಬಂದಿದ್ದಾರಂತೆ. ಕೆಲಸವಿಲ್ದೆ ಮನೇಲಿ ಕುಳಿತು ಬೇಜಾರು. ನಿಮ್ಮ ಯಜಮಾನರಿಗೊಂದು ಮಾತು ತಿಳಿಸಿ. ಒಂದು ಕೆಲಸ ಕೊಡಿಸಿ ಅಂದಳು ಡಬ್ಬಲ್ ಗ್ರ್ಯಾಜುವೇಟಂತೆ'' ಎಂದು ಅವರಿಬ್ಬರ ಮೇಡ್ ಫಾರ್ ಈಚ್ ಅದರ್ ಕಥೆಗೆ ಮಂಗಳ ಹಾಡಿದಳು.



ತಾತ, ನಿವ್ಹೇಳಿದಹಾಗೆ, ಗುಡೀಗೆ ಹೋಗಿ
ಕುಂಕುಮಾರ್ಚನೇ, ಅಷ್ಟೋತ್ತರ, ಎಲ್ಲಾ ಮಾಡ್ಸಿದೀನಿ,
ಇನ್ನು ಯೂನಿಟ್ ಟ್ರಸ್ಟ್ ಭದ್ರವಾಗಿರುತ್ತೆ.

"ಸುಪ್ರಭಾತವು ನಿನಗೆ..."

–ಎಚ್. ಗೋಪಾಲಕೃಷ್ಣ

ಸುಪ್ರಭಾತವು ನಿನಗೆ... ಏಳಯ್ಯಾ ಕನ್ನಡಿಗಾ
ಹನ್ನೆರಡು ತಿಂಗಳು ಕಳೆದು
ಮತ್ತೆ ಬಂದಿದೆ ನವಂಬರು
ನವಂಬರು ಅಂದರೆ ಗೊತ್ತೇನಯ್ಯಾ
ಭುವನೇಶ್ವರಿಯ ಬರ್ತ್‌ಡೇ ಅದುವೇ ಕಾಣಯ್ಯಾ

ಗಲ್ಲಿಗಲ್ಲಿಗಳಲಿ ರಸ್ತೆ ಪಸ್ತೆಗಳಲಿ
ಇಪ್ಪತ್ತು ಮೂವತ್ತರ ಸೈಟಿನಲಿ ಆಟದ ಮೈದಾನದಲಿ
ಹಾಕಯ್ಯಾ ಪೆಂಡಾಲು ಸಿಕ್ಕಿಸಯ್ಯಾ ಸ್ಪೀಕರುಗಳಾ

ಕೈಯಲಿರಲಿ ಗೋಲಕ ಜೇಬಿನಲಿ
ರಸೀತಿ ಪುಸ್ತಕ ಬಾಯಲಿ ಬೇಕಿದ್ದರೆ ತುಂಡುಬೀಡಿ
ಇಲ್ಲವಾದಲ್ಲಿ ಭುವನೇಶ್ವರಿ ಬೆಂಗಾವಲಿಗೆ ಪಡ್ಡೆಹಿಂಡು

ಗೋಳಕ ತುಂಬದ ರಣಹೇಡಿಗಳಿಗಿಕ್ಕು
'ಇಕ್ಕಿಮೆಟ್ಟಿದ'ನೆಂಬ ಕವಿವಾಣಿಯ
ನಿಜವ ಮಾಡಯ್ಯಾ ಶೂರ

ಕಲೆಹಾಕು ಕನ್ನಡ ಕಸದ ಬುಟ್ಟಿ ತುಂಬಿದವರಾ
ದೂರದರ್ಶನದಲಿ ಹಕಾರ ಓಡಿಸಿದವರಾ
ದೆವ್ವ ತೆರೆಯಲಿ ವಿಮಾನ ಸುಟ್ಟವರಾ

ಹಸಿರು ನೂರು ಧಾನು ಹಳದಿ ನೂರುಧಾನು ಕೆಂಪು
ಹಳದಿ ಕೆಂಪು ಅದಕ್ಕೊಂದು ಕೋಲು
ಚುಚ್ಚುಲಾಕಾಶಕೆ ಅವು, ಆಹಾ ಎಂಥಾ ಚೆಲುವು

ಕನ್ನಡ ನೆಲೆ ಕನ್ನಡ ಜಲ ಕನ್ನಡ ಗಾಳಿ ಕನ್ನಡ ಚಂದ್ರ
ಕನ್ನಡ ಸೂರ್ಯರು ಆಡಲಿ ಹಾಡಲಿ ಕುಣಿಯಲಿ
ನಮ್ಮೆಲ್ಲೋ ಇವೆ ನಕ್ಷತ್ರಗಳು - ಹಾಕಯ್ಯಾ ಕನ್ನಡರೆಕಾರ್ಡು

ಹುಟ್ಟಿದರೇ ಕನ್ನಡನಾಡಲಿ ಹುಟ್ಟವ, ಆಕಾಶವೇ ಬೀಳಲಿ ಮೇಲೆ
ಭಾರತ ಜನನಿಯ ತನುಜಾತೆ... ಹಾಡುಗಳು ಮೊಳಗಲಯ್ಯಾ
ಹಗಲಿರುಳೂ - ಛಲಬಿಡದ ತ್ರಿವಿಕ್ರಮನ ಹಾಗೇ

ರನ್ನ ಪೊನ್ನ ಜನ್ನರು, ರಾಘವಾಂಕ ಹರಿಹರ ಅಲ್ಲಮರು
ಕುವೆಂಪು ಕಾರಂತ ಮಾಸ್ತಿ ಗೋಕಾಕು ಅನಂತಮೂರ್ತಿ ಬೇಂದ್ರೆ
ಇಂದ್ರ ಚಂದ್ರ ದೇವೇಂದ್ರರು ಸಿಂಗರಿಸಲಿ ಮಂಟಪವ

ಸಾಹಿತಿಗಳಿಗಾಗಲಿ ಸನ್ಮಾನ
ಭೋರ್ಗರೆಯಲು ಆರ್ಕೆಷ್ಟ್ರಾ
ಇರಲಿ ತಾರೆಗಳು ನಮ್ಮ ನಡುವೆ
ರಾಜಕಾರಣಿಗಳು? ಪಾಪ ಇರಲಿ ಅವರೂ ನಮ್ಮವರೇ...

ಸಾಧುಗೆ ಸಾಧು
ಬಾಧಿಪ್ಪ ಕಲಿಕೆ ಕಲಿಯುವ ವಿಪರೀತನ್
ನೀನು ಕಣಾ ಹೇ ಕನ್ನಡಿಗಾ

ಛಲದಂಕ ಮಲ್ಲನಯ್ಯಾ ನೀನು,
ಹುಲಿಯ ಹಾಲನು ಮೆದ್ದವನಯ್ಯಾ ನೀನು
ಏಳು ಶರಧಿಯ ದಾಟಿದವನ ಕುಲ ಪುತ್ರನಯ್ಯಾ ನೀನು

ಏಳೇಳು ಹೇ ಕನ್ನಡಿಗಾ
ಏಳೇಳು ನವಂಬರ್ ಮಟ್ಟಿಗಾದರೂ
ಮತ್ತೆ ಮಲಗು ಹನ್ನೊಂದು ತಿಂಗಳೂ...

ಪುಸ್ತಕೋತ್ಸವ

– ಗೌತಮ

ಕರ್ನಾಟಕ ಎಂಬೋ ನಮ್ಮ ರಾಜ್ಯದಲ್ಲಿ ಕನ್ನಡ ರಾಜ್ಯೋತ್ಸವ ಎಂಬೊಂದು ಹಬ್ಬವನ್ನು ಇಂಗ್ಲಿಷ್ ಕ್ಯಾಲೆಂಡರಿನ ನವೆಂಬರ್ ಒಂದರಂದು ಆಚರಿಸಬೇಕೆಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ. ನಾವು, ಅಂದರೆ ಕನ್ನಡಿಗರು, ಅನುಕೂಲ ಸಿಂಧುಗಳಾದ್ದರಿಂದ (Flexible, Collapsible ಕೂಡಾ) ನವೆಂಬರ್ ಒಂದರಿಂದ ಹಿಡಿದು ಮುವ್ವತ್ತರವರೆಗೂ, ಸಾಧ್ಯವಾಗದಿದ್ದಲ್ಲಿ ಡಿಸೆಂಬರ್ ಮುವ್ವತ್ತೊಂದರವರೆಗೂ, ವಿಸ್ತರಿಸಿಬಿಡುತ್ತಾರೆ. ಅದೂ ಸಾಧ್ಯವಾಗದ್ದಿರೆ ಮುಂದಿನ ವರ್ಷಕ್ಕೂ ಹಾಕಬಹುದು. ನವೆಂಬರ್ ಡಿಸೆಂಬರ್‌ಗಳಲ್ಲಂತೂ ರಾಜ್ಯದ ಒಂದಲ್ಲ ಒಂದು ಕಡೆ ಕನ್ನಡದ 'ಮೊಳಗು' ಕೇಳಿಸುತ್ತಲೇ ಇರುತ್ತದೆ.

ನಮ್ಮ ಕಂಪನಿಯಲ್ಲೂ ಮೊನ್ನೆ, ಅಂದರೆ ನವೆಂಬರ್ ಮೊದಲ ವಾರದಲ್ಲಿಯೇ ಕಳೆದ ವರ್ಷದ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ನಾಡಿನ ಖ್ಯಾತ ಸಾಹಿತಿಗಳಿಗೆ ಸನ್ಮಾನ ಮಾಡುವುದು ನಂ ಕಂಪನಿಯ ಸಂಪ್ರದಾಯ. ಕನ್ನಡಕ್ಕಾಗಿ ದುಡಿದವನಿಗೆ ಸನ್ಮಾನ. ಕನ್ನಡ ಕಲಿತು ಹೆಚ್ಚಿನ ಅಂಕ ಪಡೆದ ಕನ್ನಡೇತರರಿಗೆ ಪ್ರಶಸ್ತಿ. ಇತ್ಯಾದಿ ಏನೇನೋ ಕಾರ್ಯಕ್ರಮಗಳು.

ಕನ್ನಡ ತಿಳಿಯದ ಅರ್ಧಕ್ಕಿಂತಲೂ ಹೆಚ್ಚಿನ ಉದ್ಯೋಗಿಗಳಿಗೆ, ಅಧಿಕಾರಿಗಳಿಗೆ ಇದೊಂದು ತಮಾಷೇ ಖುಷಿ. ಯಾಕೆಂದರೆ ಎಲ್ಲರೊಡನೆ ಅವರೂ ಒಂದು ಗಂಟೆ ಮುಂಚೆ work spot ನಿಂದ ಕಳಚಿಕೊಳ್ಳಬಹುದು, ತಮಗೆ ಅರ್ಥವಾಗದ ಭಾಷಣವನ್ನು ಕೇಳಬಹುದು. ಮನರಂಜನಾ ಕಾರ್ಯಕ್ರಮ ನೋಡಬಹುದು. ಕನ್ನಡಿಗರು ನಕ್ಕಾಗ ಅವರೂ ನಗಬಹುದು. ಅಥವಾ 'ವಾಯ್ಯಾ ಅಂದ ಕನ್ನಡ ರಾಜ್ಯೋತ್ಸವ ಯವ ಪಾಕ್ಕರಾ?' ಅಂತಂದುಕೊಂಡು ಮನೆಗೂ ಹೋಗಬಹುದು. ಯಾವ ದೊಣ್ಣೆ ನಾಯ್ಕನ ಅಭ್ಯಂತರವೂ ಇಲ್ಲ.

ಉಳಿದ ಕನ್ನಡಿಗರಿಗಾಗಿ ಪುಸ್ತಕ ಮಳಿಗೆಯೊಂದನ್ನಿಡಲು ಆಡಳಿತವರ್ಗ ಅನುಮತಿ ನೀಡಿತು, ಇದ್ದ ಮೂರೂ ಮತ್ತೊಬ್ಬ ಉದ್ಯೋಗೀ ಸಾಹಿತಿಗಳು ಅಟ್ಟದ ಮೇಲಿದ್ದ ಪುಸ್ತಕಗಳನ್ನು ತಂದಿದ್ದೆವು. ಆದರಲ್ಲಿ ನಾನೂ ಒಬ್ಬ, ಕವನ

ಸಂಕಲನ, ಕಾದಂಬರಿ, ಕಥಾಸಂಕಲನ ಎಲ್ಲ ಇದ್ದವು. ಎಲ್ಲಕ್ಕೂ ರಿಯಾಯಿತಿ. ''ತೀರುವಳಿ ಮಾರಾಟ'' ಅಂತ ಬೋರ್ಡ್ ಮಾತ್ರ ಹಾಕಿರಲಿಲ್ಲ ಅಷ್ಟೆ. ನಮ್ಮ ಪರಿಚಯ ಮಿಕ್ಕವರಿಗೆ ಆಗಲೆಂಬ ಉದ್ದೇಶದಿಂದ ಪುಸ್ತಕಗಳನ್ನು ಮುಖಾಡೆ ಹಾಕಿದ್ದೆವು. ಪುಸ್ತಕಗಳ ಬೆನ್ನಮೇಲೆ ನಮ್ಮ ಭಾವಚಿತ್ರ ಜೊತೆಗೆ ಬೆಸ್ನುಡಿಗಳಿದ್ದವು.

ನಮ್ಮ ಪುಸ್ತಕವನ್ನು ನಾವೇ ನಿಂತು ಮಾರುವುದು ಸರಿಯಲ್ಲ ಅಂತ ನನ್ನ ಸ್ವಂತ ಅಭಿಪ್ರಾಯ. ಅದಕ್ಕೋಸ್ಕರ ಬೇರೆಯವರ ಕೈಲಿ ನೂರು ಪ್ರತಿಗಳನ್ನು ಮಳಿಗೆಗೆ ಕಳಿಸಿದ್ದೆ. ಮೈಕಾಸುರ ಅರಚಿಕೊಳ್ಳುತ್ತಿದ್ದ ''ನಾವಾಡುವ ನುಡಿಯೇ ಕನ್ನಡ ನುಡಿ''ಯನ್ನು ಕೇಳಿಕೊಳ್ಳುತ್ತ, ಒಂದೈವತ್ತಾದರೂ ಪುಸ್ತಕಗಳು ಖರ್ಚಾಗಿರುತ್ತೆ ಎಂಬ ಕನಸು ಕಾಣುತ್ತ ಮಳಿಗೆಯತ್ತ ಹೆಜ್ಜೆ ಹಾಕಿದೆ. ಅರೆ! ಮತ್ತೊಬ್ಬನನ್ನ ಬಿಟ್ಟುಬಿಟ್ಟು ಮೂವರೂ ಸಾಹಿತಿಗಳೂ ತಮ್ಮ ತಮ್ಮ ಪುಸ್ತಕಗಳ ಹಿಂದೆ (ಮುಂದೆ?), ನಿಂತುಬಿಟ್ಟಿದ್ದರು! ನಾನೂ ನಿಂತೆ.

ಬಂದರು, ಬಂದರು. ಸಾಲುಸಾಲಾಗಿ ಬಂದರು. ವಸ್ತು ಪ್ರದರ್ಶನದಲ್ಲಿ ಹಾಕಿರುವಂತೆ 'ದಯವಿಟ್ಟು ಮುಟ್ಟಬೇಡಿ' ಅಂತ ಬೋರ್ಡ್ ಹಾಕದಿದ್ದರೂ, ಬರೀ ಕಣ್ಣಲ್ಲೇ ನೋಡಿ ಮುಂದಕ್ಕೆ ಚಲಿಸುತ್ತಿದ್ದರು. ಕೂಡಲೇ ಕಾರ್ಯಪ್ರವೃತ್ತನಾಗಿ 'ಪುಸ್ತಕಗಳನ್ನು ತೆರೆದು ನೋಡಬಹುದು' ಅಂತ ಸ್ಕೆಚ್. ಪೆನ್ನಿನಲ್ಲಿ ಬರೆದು ಮೇಜಿನ ಮೇಲಿಟ್ಟೆ.

ನೋಡಿದರು, ಮುಟ್ಟಿದರು, ತೆರೆದರು, ಮುಚ್ಚಿದರು. ಮುಖ ಬೆನ್ನುಗಳನ್ನು ತಿರುಗಿಸಿ ನೋಡಿದರು. ಇಟ್ಟರು. "ನೀವೇನಾ ಸಾರ್ ಇದನ್ನ ಬರೆದಿರೋದು!' ಅಂತ ಒಂದು ಹೆಣ್ಣು ದನಿ ಕೇಳಿದಾಗ ಒಂದು ಪುಸ್ತಕ ಸೇಲ್ ಆಗೇಹೋಯ್ತು ಅಂದುಕೊಂಡೆ. ಆದರದು ಆಕೆಯ ಕೈಗಳಲ್ಲಿ ಟಾಸು-ಮರುಟಾಸಾಗಿ ಕೊನೆಗೆ ತನ್ನ ಸ್ಥಾನದಲ್ಲಿ ಸ್ಟಿಲ್ ಆಯ್ತು.

'ನೋಡೋ, ಇವರು ನಮ್ಮ ಬಾಸು. ಫಸ್ಟ್ ಕ್ಲಾಸಾಗಿ ಬರೀತಾರೆ ಗೊತ್ತಾ?' ಅಂತ ಪಕ್ಕದವನಿಗೆ ಹೇಳಿದ ಇನ್ನೊಬ್ಬ, ಆ ಪಕ್ಕದವ ಘೇಂಡಾಮೃಗವನ್ನು ನೋಡುವಂತೆ ನನ್ನನ್ನು ನೋಡುತ್ತ ಮುಂದೆ ಹೋದ.

ನನ್ನ ಹಳೇ ಮಿತ್ರನೊಬ್ಬ ಮುಂದೆ ಬಂದ ''ಏನೋ ಇದೂ?! ಈ ಪುಸ್ತಕ ಗಿಸ್ತಕ ಬರೆಯೋ ಅಭ್ಯಾಸ ಯಾವಾಗಲಿಂದ ಮಾಡಿಕೊಂಡೆಯೋ?'' ಅಂತ ಮೇಲಿನಿಂದ ಕೆಳಗಿನವರೆಗೂ ನೋಡಿದ. ನಾನೇನೋ ಮಾಡಬಾರದ ಕೆಲಸ ಮಾಡಿ ಎಕ್ಕುಟ್ಟೋಗೋ ಹಾದಿ ಹಿಡಿದಿದ್ದೇನೇನೋ ಅನ್ನೋ ಥರ.

ಇನ್ನೊಂದು ಗುಂಪು ಬಂತು. ಒಬ್ಬ (ಬಹುಶಃ ಆ ಗುಂಪಿನ ಲೀಡರ್) ''ಒಂದು ಮಾತು ಕೇಳ್ಲಾ?' ಅಂದ. ''ಕೇಳೀ'' ಅಂದೆ ''ಇವಕ್ಯಾಕ್ರೀ ಇಷ್ಟು ಬೆಲೆ

ಇಟ್ಟಿದ್ದೀರ? ಇಪ್ಪತ್ತೈದು ರೂಪಾಯಿ ಅಂದ್ರೆ ಯಾವೋನ್ರೀ ಕೊಂಡುಕೋತಾನೇ? ಆ ದುಡ್ಡಿಗೆ ಹೈಕ್ಲಾಸ್ ಎರಡು ಬೆಣ್ಣೆ ಮಸಾಲೆ ಸಿಗುತ್ರೀ'' ಅಂದ.

ಮೆಣಸಿನ ಕಾಯಿಗಳನ್ನು ಅರೆದು ಮೈಗೆಲ್ಲ ಹಚ್ಚಿಕೊಂಡ ಅನುಭವವಾಯಿತು. 'ತಾಳ್ಮೆಯೇ ತಾಯಿ ತಂದೆ' ಅನ್ನೋ ನನ್ನ ಮಿತ್ರನ ಮಾತು ನೆನಪಿಗೆ ಬಂದು ಕಷ್ಟಪಟ್ಟು ತೆಪ್ಪಗೆ ನಿಂತೆ. ಪುಸ್ತಕೋತ್ಸವ ಮುಗಿಯಿತೆನ್ನಿಸಿತು. ಪುಸ್ತಕಗಳನ್ನೆಣಿಸಿದೆ ಒಂದು ಹೆಚ್ಚಿಲ್ಲ. ಒಂದು ಕಡಿಮೆಯಿಲ್ಲ. Exact ಆಗಿ ನೂರು!! ಬೆನ್ನ ಮೇಲಿದ್ದ ಭಾವಚಿತ್ರವನ್ನು (ನನ್ನ) ನೋಡುತ್ತ ನಿಂತೆ. ಅದು ನನ್ನನ್ನು ನೋಡಿ ನಕ್ಕಂತಾಯಿತು.

ಅದನ್ನು ಮುಗುಚಿಟ್ಟೆ



ಶಾಸಕರ ಪಲ್ಸ್ ನೋಡಿ ಮುಂದಿನ ಹೆಜ್ಜೆಯ ನಿರ್ಧಾರ ಮಾಡೋಣಾಂತಿದೀನಿ.

ಇಂಟರ್ನೆಟ್ ವಿಸ್ಡಮ್

- ಶಿರೀಷ್ ಯಕ್ಕುಂಡಿ

★ ಕಳೆದು ಹೋಗಿರೋ ವಸ್ತು ಮತ್ತೆ ಸಿಗಬೇಕಾದರೆ ಒಂದು ಸರಳಉಪಾಯ

- ಅಂಥದೇ ವಸ್ತುವನ್ನ ಹೊಸದಾಗಿ ಕೊಂಡು ತನ್ನಿ.

★ ಜೀವನಾನ ಗಂಭೀರವಾಗೇನೂ ತೊಗೋಬೇಡಿ

- ಇದುವರೆಗೂ ಅದರಿಂದ ಯಾರೂ ಜೀವಸಹಿತ ತಪ್ಪಿಸಿಕೊಂಡಿಲ್ಲ.

★ ಪಾದಚಾರಿಗಳಲ್ಲಿ ಎರಡು ವಿಧ

- ಬೇಗ ದಾರಿ ದಾಟೋರು ಮತ್ತು ಬೇಗ ವೈತರಣಿ ದಾಟೋರು

★ ಕಳೆಕೀಳುವಾಗ, ಕಳೆ ಯಾವುದು ಗಿಡ ಯಾವುದು ಅಂತ ಗುರುತಿಸೋದು ಬಹು ಸುಲಭ.

- ಎಳೆದು ನೋಡಿ, ಸುಲಭವಾಗಿ ಕೈಗೆ ಬಂದರೆ ಅದು ಗಿಡ.

★ H_2O ಕುಡಿದು ಸತ್ತದ್ ಯಾರು?

- ಅದೇ, ರಾಜು, ಪಾಪ, ಕುಡಿದದ್ದು H_2SO_4 ರು!

★ ಆರೋಗ್ಯ ಅಂದ್ರೇನು ಅಂದ್ರಾ?

- ಅತಿ ನಿಧಾನವಾಗಿ ಸಾಯೋಮಾರ್ಗ ಕಣ್ರೀ!

★ ಜಡ್ಜಿ

- ಯಾರಕಡೆ ಲಾಯರು ಬುದ್ಧಿವಂತ ಅಂತ ನಿರ್ಧರಿಸುವವ.

★ ನಿನ್ನ ಪತ್ನಿ ನೀ ಹೇಳೋದನ್ನೆಲ್ಲಾ ಬಹು ಆಸಕ್ತಿಯಿಂದ ಕೇಳಿಸ್ಕೋಬೇಕಾದ್ರೆ

- ನಿದ್ದೇಲಿ ಮಾತಾಡೋದನ್ನ ಕಲಿ.

★ ಬ್ರೆಡ್ಡು ಮೆತ್ತಗಿದ್ದಷ್ಟೂ

- ಬೆಣ್ಣೆ ಗಟ್ಟಿ.

★ ಒಬ್ಬರಿಂದ ಕದ್ದರೆ ಕೃತಿಚೌರ್ಯ

- ಹಲವರಿಂದ ಕದ್ದರೆ ಸಂಶೋಧನೆ

★ ನೀತಿನಿಯಮಗಳ ಸಂಕೋಲೆಯನ್ನು ಕಿತ್ತೊಗಿಯಿರಿ

- ರಾಜಕೀಯದಲ್ಲಿ ಯಶಸ್ವಿಯಾಗಿ.

★★★

ಅಪರಂಜಿಯ ಅಂತರ್ದೃಷ್ಟಿ

ಶಿಲಾಬಾಲಿಕೆ

ಅಪರಂಜಿ ಮೂಲೆ ಸೇರ್ಕೊಂಡು ಅಳ್ತಾ ಇದ್ಲು. ''ಯಾಕಪರಂಜಿ, ಹೋದ ತಿಂಗಳು ಹುಚ್ಚಾಪಟ್ಟೆ ನಗ್ತಿದ್ದೆ, ಈ ತಿಂಗಳು ಅಳ್ತಿದೀಯಲ್ಲ'' ಅಂತ ಕೇಳ್ದೆ. ಅಪರಂಜಿ ಸಿಡುಕಿನ ಮುಖ ಮಾಡಿದಳು.

''ನಿಂಗ್ಹೇಗೆ ಗೊತ್ತಾಗ್ಬೇಕು ಹೆಣ್ಣಿನ ಸಂಕಟ'' ಅಂದಳು.

''ಅದ್ಸರಿ. ಒಂದು ಹೆಣ್ಣಿನ ಕಷ್ಟ, ನೋವು, ಸಂಕಟ ಅರ್ಥವಾಗೋದು ಇನ್ನೊಂದು ಹೆಣ್ಣಿಗೇ ಅಂತಾರೆ.... ಅದ್ಸರಿ... ಯಾವ ಹೆಣ್ಣು ನೋಡಿ ನೀನು ಹೀಗೆ ಅಳ್ತಿದೀಯ.''

''ಅಲ್ನೋಡು... ಮೂಲೇಲಿ ಸೇರಿ ಕಣ್ಣೀರು ಹಾಕ್ತಿದಾಳಲ್ಲ ಅವಳು''

''ಯಾರದು'' ಅಂತ ಮೂಲೆ ನೋಡಿದೆ. ಯಾರೋ ಮುದುರಿ ಮೂಲೆ ಸೇರಿ ಕಣ್ಣೀರು ಹಾಕ್ತಿದ್ರು.

''ಯಾರಪರಂಜಿ ಅದು... ನಿನ್ನಜ್ಜಿ... ಅತ್ತಜ್ಜಿ (ಗಂಡನ ಅಜ್ಜಿ - ಗಂಡನ ತಾಯಿ ಅತ್ತೆ... ಗಂಡನ ಅಜ್ಜಿ ಅತ್ತಜ್ಜಿ) ಇರಬಹುದಾ''

''ತಿಳಿದೂ ತಿಳಿದೂ ಕೇಳ್ತೀಯಲ್ಲ... ಅದಿಕ್ಕೇ ಹೇಳೋದು ಹೆಣ್ಣಿನ ಕಷ್ಟ ನಿಮಗರ್ಥವಾಗಲ್ಲ ಅಂತ'' ಅಪರಂಜಿ ಸಿಡುಕಿದಳು.

''ಹೌದು, ಅರ್ಥವಾಗ್ಲಿಲ್ಲ ಅಂತ ಒಪ್ಕೊಂಡ್ನಲ್ಲ... ಈಗಲಾದರೂ ಹೇಳು''

''ನೀವೆಲ್ಲ ಹಾಡಿ... ಹೊಗಳಿ... ಹೊನ್ನಶೂಲಕ್ಕೇರಿಸಿ, ಮೆರೆಸಿ ಮೆರೀತೀರಲ್ಲ... ಅವಳೇ''

''ಇನ್ನೂ ಅರ್ಥವಾಗಲಿಲ್ಲ''

''ಅದೇ ಭಾರತಾಂಬೆಯ ವರಪುತ್ರಿ, ಕರ್ನಾಟಕ ಮಾತೆ, ಭುವನೇಶ್ವರಿ ಅಂತೆಲ್ಲ ಹಾಡಿ ಹೊಗಳ್ತೀರಲ್ಲ ಅವಳು''

''ಹಾಗಾದ್ರೆ, ನವಂಬರ್ ತಿಂಗಳ ರಾಣಿ''

ಥಟಕ್ಕನೆ ಬಾಯಿಂದ ಮಾತುದುರಿತು

''ನೋಡ್ದ್ಯಾ... ನೀನೇ ಒಪ್ಕೊಂಡ್ಯಾ. ಅಲ್ಲ... ಒಂದು ತಿಂಗಳು ಅವಳನ್ನ ಹಾಡಿ, ಹೊಗಳಿ, ಕೊಂಡಾಡಿ ಆಮೇಲೆ ಇನ್ನು ಹನ್ನೊಂದು ತಿಂಗಳು ಅವಳ್ನ ಯಾವೂರ ಅಮ್ಮಣ್ಣಿ ಅಂತ ಕೂಡಾ ಮಾತಾಡಿಸ್ದೆ ಹೋಗ್ತೀರಲ್ಲ ಇದು ನ್ಯಾಯವಾ''

ಅಪರಂಜಿ ಸವಾಲು ಹಾಕಿದಳು

ಖಂಡಿತ ಸರಿಯಲ್ಲ. ಕನ್ನಡಿಗರಲ್ಲಿ ಕನ್ನಡದ ರಕ್ತ ಸದಾ ಹರೀತಿರಬೇಕು, ಕನ್ನಡ ಪ್ರಜ್ಞೆ ಜಾಗೃತವಾಗಿರಬೇಕು, ಕನ್ನಡ ಬೆಳೆಯೋ ಕೆಲಸ ನಿರಂತರವಾಗಿ ಸಾಗ್ತಿರಬೇಕು. ಹೌದು ಆದರೆ ಇದೆಲ್ಲ ಯಾರು ಮಾಡೋ ಕೆಲಸ... ಯಾರೊಬ್ಬರೂ ಅಲ್ಲ. ಎಲ್ಲರೂ ಎಲ್ಲ ಕನ್ನಡಿಗರೂ ಮಾಡಬೇಕು.

''ಬಾ ಅಪರಂಜಿ ಕನ್ನಡ ತಾಯಿನ ಸಮಾಧಾನ ಮಾಡೋಣ'' ಅಂದು ಅತ್ತ ಹೊರಟೆ

''ನಮಸ್ಕಾರ ಕನ್ನಡ ತಾಯಿ... ಯಾಕಮ್ಮ ಮೂಲೆ ಸೇರಿದೀಯ''

''ನಾನು ಸೇರಿಲ್ಲ... ನೀವೆಲ್ಲ ಸೇರಿ ನನ್ನ ಅಂಚಿಗೆ ತಳ್ಳಿದೀರಿ. ಸಿನಿಮಾ ಆಗಲೀ, ನಾಟಕ ಆಗಲೀ, ಪೇಪರ್ ಆಗಲೀ, ಸ್ಕೂಲ್ ಆಗಲೀ ಎಲ್ಲ ಕಡೆ ನಾನು ಸಾಲಿನಲ್ಲಿ ಕೊನೆಯವಳು. ಏನಿದ್ದರೂ ನನಗೆ ಕೊನೇ ಆದ್ಯತೆ... ಹೀಗಾದ್ರೆ ನಾನಿದೀನಿ ಅನ್ನೋದೇ ಮರೆತುಹೋಗುತ್ತೆ'' ಕನ್ನಡ ತಾಯಿ ಅತ್ತಳು.

''ಬೇಡ ತಾಯಿ ಅಳಬೇಡ... ನಿನ್ನ ಒಂದೊಂದು ಕಣ್ಣೀರಿನಿಂದಲೂ ಒಬ್ಬೊಬ್ಬ ಅನ್ಯಭಾಷೀಯರು ಹುಟ್ಟಿ ನಿನ್ನ ಅಸ್ತಿತ್ವಕ್ಕೆ ಕಳಂಕ ಬಂದೀತು...''

''ಬರೋದಿನ್ನೆಲ್ಲಿ... ಬಂದು ಮೆಟ್ಕೊಂಡಾಗಿದೆಯಲ್ಲ ಒಂದು ವರ್ಷ ಕಡೆಗಣಿಸಿ ಒಂದು ತಿಂಗಳು ಧಾಂ, ಧೂಂ, ಅಂತ ಮೆರೆದಾಡಿದ್ರೆ ಸಾಕಾ... ಬೇರನ್ನೇ ಮರೆತರೆ ಬದುಕೋದು ಸಾಧ್ಯವಾ... ಒಂದು ವರ್ಷ ಉಪವಾಸ, ಒಂದು ತಿಂಗಳು ಹಬ್ಬದೂಟ ಅಂದ ಹಾಗಲ್ಲ'' ಕನ್ನಡ ತಾಯಿ ಪ್ರಲಾಪಿಸಿದಳು.

''ನಿನ್ನ ಸಮಸ್ಯೆ ಅರ್ಥವಾಗುತ್ತೆ... ಏನು ಮಾಡೋಣ ಹೇಳು''

''ಹೆಚ್ಚಿಗೆ ಏನೂ ಬೇಡ... ನೀನು ನಾಲ್ಕು ಜನಕ್ಕೆ ಕನ್ನಡ ಕಲಿಸು, ಒಬ್ಬೊಬ್ಬರು ನಾಲ್ಕು ನಾಲ್ಕು ಜನಕ್ಕೆ ಕನ್ನಡ ಕಲಿಸಿ, ಕನ್ನಡದ ಕಂಪು ಹರಡಲಿ ಆಗಲೇ ನನಗೆ ಸಂತೋಷ''

''ಆಯ್ತು ತಾಯಿ... ಮೊದಲು ನಿನ್ನ ಕಣ್ಣೀರು ಒರೆಸ್ಕೊ... ಈಗಿನಿಂದಲೇ ಸಂಕಲ್ಪ ಮಾಡಿದೀನಿ... ನಿನ್ನಾಸೆ ನೆರವೇರುತ್ತದೆ''

''ಹೋಗಿ ಬಾ ಒಳ್ಳೇದಾಗಲಿ. ಆದರೆ ಆ ಶಂಕರನ ಹಾಗೆ ಮಾಡಬೇಡ''

''ಶಂಕರ ಏನು ಮಾಡ್ದ''

''ಕನ್ನಡ ಕಲಿಸೋಕೆ ಹೋಗಿ, ಕನ್ನಡಾನೆ ಮರೆತು ಬೇರೆ ನಾಲ್ಕು ಭಾಷೆ ಕಲಿತು ಬಂದ''

ನಾನು ಇನ್ನೇನೋ ಹೇಳೋಣಾಂತಿದ್ದೆ. ಬೆನ್ನ ಮೇಲೊಂದು ಬಾರಿಸಿ 'ಗಾಯದ ಮೇಲೆ ಬರೆ ಎಳೀಬೇಡ ಬಾ' ಅಂತ ಅಪರಂಜಿ ಎಳ್ಕೊಂಡ್‌ಬಂದ್ಲು.

ಜೈ ಕರ್ನಾಟಕ ಮಾತೆ

ಕೃತಿಚೌರ್ಯ ಕಮ್ಮಟ

– ಸುಕೃತ

ಸಾಹಿತ್ಯ ಕ್ಷೇತ್ರದಲ್ಲಿ ಏನಾದರೂ ಹೊಸದೊಂದು ಮಾಡುತ್ತಿರಬೇಕು ಎಂಬ ಹುಮ್ಮಸ್ಸಿನಿಂದ ಸಂಘಸಂಸ್ಥೆಗಳನ್ನು ಹುಟ್ಟುಹಾಕಿದ ಕೆಲವು ಬ್ರಹ್ಮರಿಗೆ ಮೊನ್ನೆ ಮಂಕೇಶ್ ಬಗ್ಗೆ ಐಡಿಯಾ ಕೊಟ್ಟ ಇಬ್ಬರು ಸಾಹಿತಿಗಳು ತಾವು ಬರೆದ ಕಾಗಕ್ಕ-ಗುಬ್ಬಕ್ಕನ ಕಥೆ ಬಗ್ಗೆ ಪತ್ರ ಸಮಯದಲ್ಲಿ ಪಾಲ್ಗೊಂಡರು. ಒಬ್ಬ ಸಾಹಿತಿ ತಾನು ಬರೆದಿದ್ದು ಮೊದಲು ಎಂದು ವಾದ ಮಂಡಿಸಲು ಸಾಕಷ್ಟು ಮಾಹಿತಿ ನೀಡಿ ತನ್ನ ತಲೆ ಕೆದರಿಕೊಂಡು ಬೆರೆಯವರ ತಲೆ ಕೆಡಿಸಿದರೆ ಇನ್ನೊಬ್ಬ ವೇದಾಂತ ನೀಡಿದ. ಕಥೆ ಅನ್ನೋವಸ್ತು ಕದಿಯುವಂತದ್ದೇ. ಹಾಗಿರುವಾಗ ಕಥಾ ವಸ್ತುವಿನ ಕೃತಿ ಚಾರ್‍ಯದ ಬಗ್ಗೆ ಏಕೆ ಜಗಳ. ಬೇಕಾದರೆ ನಾನು ಬರೆದಿದ್ದನ್ನು ಯಾರೂ ಬೇಕಾದರೂ ಕದಿಯಲಿ. ಓಪನ್ ಆಫರ್ ಮಾಡಿದ. ಎಷ್ಟಾದರೂ ನಾವೆಲ್ಲಾ ಬರೆಯುವುದು Cock and bull stories ತಾನೆ ಅಂತಾ ಬುಲ್‌ಟೆಂಪಲ್ ರಸ್ತೆಯಲ್ಲಿ ಜೋರಾಗಿ ಹೇಳಿದ. ಎಲ್ಲರೂ ಒಪ್ಪುವ ಮಾತೆ. ಈ ಹೊಸ ವಿಷಯದಿಂದ ರಾಮಣ್ಣನಿಗೆ ಕಿಕ್ ಸಿಕ್ಕಿತು. ತಕ್ಷಣ ಗೆಳೆಯರ ಗುಂಪು ಕರೆದ.

ಕೃತಿಚೌರ್ಯದ ಬಗ್ಗೆ ಕಮ್ಮಟವೊಂದರ ರೂಪರೇಖೆ ಸಿದ್ಧವಾಯಿತು. ಕೃತಿಚೌರ್ಯದ ಪಿತಾಮಹ ಸಿಗುವ ಸಾಧ್ಯತೆಯಿಲ್ಲದಿದ್ದರಿಂದ ಆಚಾರ್ಯರನ್ನೇ ಕರೆಯಲು ತೀರ್ಮಾನವಾಯ್ತು. ಕಾನೂನಿನ ತೊಡರುಗಳು ಅವರ ಪರಿಹಾರಗಳ ಬಗ್ಗೆ ವಕೀಲರಾದ ಹಾ.ರಾ. ಬರಲು ಒಪ್ಪಿದರು. ಪೋಲಿಸ್ ಉನ್ನತಾಧಿಕಾರಿಯೊಬ್ಬರು ಕೃತಿಚೌರ್ಯದ ಬಗ್ಗೆ ಹೊಸ ಆಯಾಮ ನೀಡಲು ಮುಂದೆ ಬಂದರು. ಹೀಗೆ ಪ್ರತಿಯೊಂದು ದೃಷ್ಟಿಕೋನದಲ್ಲೂ ಕೃತಿಚೌರ್ಯ ಅಂದು-ಇಂದು-ಮುಂದು ಕಮ್ಮಟದ ಮುಖ್ಯ ಶೀರ್ಷಿಕೆ ಆಯ್ತು.

''ಇಡೀ ದಿನದ ಕಾರ್ಯಕ್ರಮ ಅಂದರೆ ಒಬ್ಬಟ್ಟು ಆಂಬೊಡೆ ಇದೇ ತಾನೆ'' ಅಂತ ಒಂದು ತಿಂಗಳಿಂದ ಪಥ್ಯದಲ್ಲಿದ್ದ ಗೋಪಿ ಕೇಳಿದ. ''ಕಮ್ಮಟಕ್ಕೂ ವಿಚಾರ ಸಂಕಿರಣಕ್ಕೂ ಏನು ವ್ಯತ್ಯಾಸ?'' ಎಂಬ ಪ್ರಶ್ನೆ ಶಿವಣ್ಣ ಕೇಳಿದ ''ಎಷ್ಟೋವೇಳೆ ಅಲ್ಲಿ ಬಂದು ನಡೆಸಿಕೊಡುವವರಿಗೆ ತಿಳಿದಿರುವುದಿಲ್ಲ ಸಭೆ ನಂತರ ಉತ್ತರ ಹೇಳುತ್ತೇವೆ'' ಎಂದ ಮೂರ್ತಿ.

'ಕೃತಿಚೌರ್ಯ' ಸರ್ವಕಾಲದಲ್ಲೂ ಪ್ರಸ್ತುತ ಹಾಗೂ ಅದರ ಬಗ್ಗೆ ಆಸಕ್ತಿಯಿರುವವರ ಸಂಖ್ಯೆ ಅಪಾರವಾದ್ದರಿಂದ ಎಂಟ್ರಿ ಫೀಸ್ ಹಾಕಿದರೆ ಒಳ್ಳೇದು ಎಂದ ಗುಂಡ. ಅಲ್ಲಿಗೆ ಸಮಾರಂಭದ ಸಿದ್ಧತೆ Freeze ಆಯ್ತು.

ಕಂಪ್ಯೂಟರ್ ಮುಂದೊಂದು ಕನಸು

– ಶಿವು

''ಮಾನಿಟರ್'' ಕೇವಲ ತರಗತಿ ಖೂಳ
ನಾಯಿ ಕಚ್ಚಿದರೆ ''ಬೈಟ್'' ಎಂದರಚುವ
ದಿನಗಳು ನೆನಪಿದೆಯೇ ನಿನಗೆ?

''ವಿಂಡೋ'' ನೆರೆಮನೆ ನಳಿನಿಯ ನೋಟ
RAM, RAM, ಭಜನೆಯು ನಿತ್ಯದ ಪಾಠ
ನೆನಪಿದೆಯೇ ನಿನಗೆ?

''ಎನ್ನುವ'' ಬದಲು ಬಳಸುವ ''ಎಂಬೀ''
ಗ್ರಂಥಮಾಲೆಯಾ ಖ್ಯಾತರು ''ಜೀಬೀ''
ನೆನಪಿದೆಯೇ ನಿನಗೆ?

''ಅಪ್ಲಿಕೇಷನ್'' ಜೊತೆ ಕೆಲಸಕೆ ಅಲೆತ
ಸಂಜೆಗೆ ''ಪ್ರೋಗ್ರಾಂ'', ಜೊತೆಗೆ ಲಲಿತ
ನೆನಪಿದೆಯೇ ನಿನಗೆ?

''ಮೆಮೊರಿ''ಯಿಂದಲೇ ಚೆಸ್ಸಿನ ಗೇಮು
ಗಲ್ಲಿಯ ಹಿಂಬದಿ ''ಸೀಡೀ ರೋಮ್''ಉ
ನೆನಪಿದೆಯೇ ನಿನಗೆ?


''ಕೀಬೋರ್ಡ್'' ಇಲ್ಲದೆ ಟೈಪಿಂಗ್ ನಾಸ್ತಿ
''ಕರ್ಸರ್'' ಶಾಪವ ಹಾಕುವ ವ್ಯಕ್ತಿ
ನೆನಪಿದೆಯೇ ನಿನಗೆ?

ಬೊಮ್ಮನ ಹಳ್ಳಿಯ ''ಮೌಸಿ''ನ ಕಾಟ
''ಕಟ್'' ಮಾಡುವುದು ಕತ್ತರಿಯಾಟ
ನೆನಪಿದೆಯೇ ನಿನಗೆ?

ಸಭ್ಯರ ನಡುವೆ ''ಆನ್ ಜಿಪ್'' ಸಲ್ಲ
ಜೇಡನು ಇಲ್ಲದೆ ''ವೆಬ್ಬೇ'' ಇಲ್ಲ
ನೆನಪಿದೆಯೇ ನಿನಗೆ?

''ವೈರಸ್'' ಬಂದರೆ ಕರ್ಚೀಫ್ ಬೇಕು
''ಪೇಸ್ಟು'' ಮಾಡಲು ಅಂಟಿರೆ ಸಾಕು
ನೆನಪಿದೆಯೇ ನಿನಗೆ?

Computalk ಅದು ಸೋಜಿಗಪೂರ್ಣ
ಎಷ್ಟೇ ಕಲಿತರು ಜ್ಞಾನ ಅಪೂರ್ಣ
ಚೆಂದದಿ ತಿಳಿದಿಹುದು ನನಗೆ



ಮಾತು - ಕತೆ

– ಎಚ್. ಗೋಪಾಲಕೃಷ್ಣ

"ಊಟ ಮಾಡಬೇಕಾದರೆ ತಟ್ಟೆ ಸುತ್ತ ಅನ್ನ ಚೆಲ್ಲಿರ್ತೀನಿ..."

"ನಾನೂ ಅಷ್ಟೇ. ಊಟ ಮಾಡಬೇಕಾದರೆ ನನ್ನ ತಟ್ಟೆ ಸುತ್ತಲೂ ಅನ್ನ ಚೆಲ್ಲಿರುತ್ತೆ..."

"ಕೆಲವು ಸಲ ನನಗೆ ಸ್ನಾನಬೇಕು ಅಂತ ಅನಿಸುಲ್ಲ..."

"ನನಗೂ ಅಷ್ಟೇ ಎಷ್ಟೋಸಲ ನಾನು ಸ್ನಾನ ಮಾಡೋದೇ ಇಲ್ಲ..."

"ಊಟ ಆದಮೇಲೆ ಬಿಸ್ಕತ್ತು ತಿನ್ನಬೇಕು ಅನಿಸುತ್ತೆ..."


"ನನಗೂ ಹಾಗೇ ಊಟ ಆದಮೇಲೆ ಏನಾದರು ತಿನ್ನಬೇಕು..."

"ನನ್ನನ್ನ ಕಂಡರೆ ಅಪ್ಪ ಅಮ್ಮಂಗೆ ಇಷ್ಟವೇ ಇಲ್ಲ ಅನಿಸುತ್ತೆ..."

"ನನಗೂ ಅಷ್ಟೇ ಮರೀ. ನನ್ನನ್ನ ಕಂಡರೆ ನಿಮ್ಮ ಅಪ್ಪ ಅಮ್ಮಂಗೆ ಇಷ್ಟ ಇಲ್ಲಕಣೋ..."

ಅಂತ ತಾತ ಮೊಮ್ಮಗ ಮಾತುಕತೆ ಆಡುತ್ತಿದ್ದರು.

(ಆಧಾರ: Chicken soup for the soul)



ದಕ್ಷಿಣಮುಖಿ

– ಆನಂದ

ಪ್ರಸಿದ್ಧ ವಾರಪತ್ರಿಕೆಯೊಂದು ಇಂತಹದೊಂದು ಉತ್ತರಮುಖಿ ಪ್ರಶ್ನೆಮಾಲಿಕೆಯನ್ನು ಪ್ರಕಟಿಸುತ್ತಿದೆ. ಅದನ್ನು ನಕಲು ಮಾಡಲು ಹೋದಾಗ ಉತ್ತರಮುಖಿ ದಕ್ಷಿಣ ಮುಖಿಯಾಗಿ ಈ ಉತ್ತರಗಳು ಹೊರಬಂದಿವೆ.

ದಕ್ಷಿಣಮುಖಿ ಪ್ರಶ್ನೆಮಾಲಿಕೆ

★ ನಿಮ್ಮ ಕಲ್ಪನೆಯಲ್ಲಿ 'ಪರಮ ಸುಖ' ಎಂದರೆ ಯಾವುದು?

ಏನೂ ಕೆಲಸ ಮಾಡದೆ ಸಂಬಳ ಪಡೆಯುವುದು

★ ನಿಮಗೆ ಅತ್ಯಂತ ಆತಂಕ/ಭಯ ತರುವ ಸಂಗತಿ ಯಾವುದು?

ಮೇಲಿನ ಉತ್ತರ ಜಗಜ್ಜಾಹೀರಾಗುವುದು!

★ ನಿಮ್ಮ ಮೇಲೆ ಅತ್ಯಂತ ಗಾಢ ಪ್ರಭಾವ ಬೀರಿದ್ದು ಏನು/ಯಾರು?

ಚೆಕ್ ಪುಸ್ತಕ/ರೇಸ್ ಬುಕ್

★ ಇತರರ ಯಾವ ಗುಣ ನಿಮಗೆ ಹಿಡಿಸುವುದಿಲ್ಲ?

ಪ್ರಾಮಾಣಿಕತೆ

★ ನಿಮ್ಮ ಯಾವ ಗುಣ ನಿಮಗೇ ಬೇಸರ ತರಿಸುತ್ತದೆ?

ಪಟ್ಟಿ ಮಾಡಲು ಜಾಗ ಸಾಲದು

★ ನಿಮ್ಮ ಅಮೂಲ್ಯ ಆಸ್ತಿ ಯಾವುದು?

ಯಾರಾದರೂ ಶ್ರೀಮಂತರು ಬಿಟ್ಟು ಹೋಗಬಹುದಂಥದ್ದು

★ ನೀವು ಸದಾ ನಿಮ್ಮೊಡನೆ ಒಯ್ಯುವ ವಸ್ತು ಯಾವುದು?

ಮುಂಗೋಪ

★ ನೀವು ಎಂದೂ ಮರೆಯಲಾಗದ ಮಾತು (ಅಮೃತವಾಣಿ?) ಯಾವುದು?

ಅರೆ! ಮರತೇ ಹೋಯಿತು

★ ನಿಮ್ಮ ಮನಸ್ಸನ್ನು ಬಹುವಾಗಿ ಕುಗ್ಗಿಸುವ ಸಂಗತಿ ಯಾವುದು?

ಇತರರು ದುಡಿದು ತಿನ್ನುವುದು

★ ನಿಮ್ಮ ಅತ್ಯಂತ ಪ್ರಿಯವಾದ ಓಡಾಡದ (ಪ್ರವಾಸದ) ತಾಣ ಯಾವುದು?
ಆದರೆ ಅಲ್ಲಿಗೆ ತಲುಪುವದಾದರೂ ಹೇಗೆ?

★ ನಿಮ್ಮ ಜೀವನದ ಅತ್ಯಂತ ಮಹತ್ವದ ನಿರ್ಣಯ ಯಾವುದಾಗಿತ್ತು?
ಮುಂದೆ ತೆಗೆದುಕೊಳ್ಳುವದಿದೆ.

★ ನಿಮ್ಮ ಜೀವನದ ಅತ್ಯಂತ ಸಂತಸದ ಕ್ಷಣ ಯಾವುದಾಗಿತ್ತು?
ಸಂತಸ? ಹಾಗೆಂದರೆ?

★ ನೀವು ಮರೆಯಬೇಕೆಂದು ಬಯಸುವ ಕಹಿ ಕ್ಷಣ?
...

★ ಎಂಥ ಸಂದರ್ಭಗಳಲ್ಲಿ ನೀವು ಸುಳ್ಳು ಹೇಳುತ್ತೀರಿ?
ನನ್ನ ಮರ್ಯಾದೆಯನ್ನು ಉಳಿಸಿಕೊಳ್ಳುವ ಸಂದರ್ಭಗಳಲ್ಲಿ

★ ನಿಮ್ಮ ಅತ್ಯಂತ ಪ್ರೀತಿಯ ಕನಸು ಯಾವುದು?
ಇದು ಪ್ರಕಟವಾಗದೆಂಬ ನಂಬಿಕೆ

★ ನಿಮಗೆ ಕಣ್ಣೀರು ಬರಿಸುವ ಸಂಗತಿ ಯಾವುದು?
ಈರುಳ್ಳಿ, ಟಿಮರ್‌ಗ್ಯಾಸ್

★ ನಿಮ್ಮ ವಿರಾಮದ ಕ್ಷಣಗಳನ್ನು ನೀವು ಹೇಗೆ ಕಳೆಯುತ್ತೀರಿ?
ಚೂರುಪಾರು ಕೆಲಸ ಮಾಡಿ

★ ನೀವು ಎಂಥ ಸಾವನ್ನು ಬಯಸುತ್ತೀರಿ?
ಸಾಯಲು ಇಷ್ಟವೇ ಇಲ್ಲವಲ್ಲ

★ ನಿಮ್ಮನ್ನು ಜನರು ಹೇಗೆ ನೆನಪಿಸಿಕೊಳ್ಳುತ್ತಿರಬೇಕು?
ಆದರೆ ಅವರು ನೆನಪಿಸಿಕೊಳ್ಳುತ್ತಾರೆಂದೇನು ಖಾತರಿ?

★ ಸಾಧ್ಯವಿದ್ದರೆ, ನೀವು ಜಗತ್ತಿನ ಬೇರೆ ಏನಾಗಲು ಬಯಸುತ್ತೀರಿ?
ಬೇರೆ ಜಗತ್ತಿಗೇ ಹೋಗಲು ಬಯಸುವೆ

★ ದೇವರು ನಿಮಗೆ ಮೂರು ವರ ಕೊಟ್ಟರೆ ಮೂರನೆಯ ವರದಲ್ಲಿ ಏನನ್ನು ಕೇಳುತ್ತೀರಿ?
ಮೊದಲೆರಡು ವರಗಳ ಬಗ್ಗೆ ನಿಮಗೇಕೆ ಆಸಕ್ತಿ ಇಲ್ಲ?

★★★

ಹೆಂಡದ ಬಾಟಲು ಬಗಲೊಳಗಿದ್ದರೆ

(ಹೆಂಡತಿಯೊಬ್ಬಳು ಮನೆಯೊಳಗಿದ್ದರೆ)

(ಕೆ.ಎಸ್.ನ. ಕ್ಷಮೆ ಕೋರಿ)

– ಬೇಲೂರು ರಾಮಮೂರ್ತಿ

ಹೆಂಡದ ಬಾಟಲು ಬಗಲೊಳಗಿದ್ದರೆ
ನನಗುಂಟು ನೂರಾರು ಬಾಯಿ
ಹೆಂಡದ ಬಾಟಲು ಬಾಯಲಿ ಇದ್ದರೆ
ನಾನೇ ಒಂದು ಪೀಪಾಯಿ...

ಹೆಂಡವು ಗಂಟಲ ಒಳಗಿಳಿದಿದ್ದರೆ
ತಣ್ಣನೆ ನೆಮ್ಮದಿ ಬದುಕು
ಹೆಂಡದ ಬಾಟಲು ಸಿಗದೇ ಹೋದರೆ
ಹುಚ್ಚನು ನಾನೇ ನಿಜಕೂ

ಮುಚ್ಚಳ ತೆಗೆದರೆ ಗಮ ಗಮ ಗಮ ಗಮ
ಏನಿದರಾ ಸೊಬಗು
ನಿಶೇಯೇರುತಿರೆ ತುಟಿಯಂಚಿನಲಿ
ಹರಡೀತೊಂದು ಸೀಳ್ನಗು

ಹಸಿವಿನ ಬೇಗೆಯ ಮರೆಸುವುದಲ್ಲ
ಊಟಕೆ ಅವಸರವಿಲ್ಲ
ಸಂಜೆಗೆ ಹೆಂಡವು ಸಿಗದೇ ಹೋದರೆ
ಸುಖ ನೆಮ್ಮದಿಯೇ ಇಲ್ಲ

ಸಾಲವ ಮಾಡಿ ಜಾಲಿಯ ಮಾಡುತ
ಕುಡಿವುದೇ ಜೀವನ ಧ್ಯೇಯ
ತಿಂಗಳ ಕೊನೆಯಲಿ ಭಿಕ್ಷೆಯ ಬೇಡುವೆ

ಏನಿದೆ ಇಲ್ ಅನ್ಯಾಯ
ಕೈಲ್ಹಿಡಿದಿದ್ದರೆ ಕುಡಿಯುತಲಿದ್ದರೆ
ಹೆಂಡದ ರುಚಿಯೇ ಚೆಂದ
ಕುಡಿಮೂ ಕುಡಿದೂ ಮಾಡುವೆ ಯೋಚನೆ
ಈ ಹೆಂಡ ಬಂದುದೆಲ್ಲಿಂದ

ಹೆಂಡವು ಹೊಟ್ಟೆಗೆ ಸೇರಿದ ನಂತರ
ಕಣ್ಣಿಗೆ ನಿದ್ದೆಯು ದೂರ
ಹೆಂಡತಿ ಜೊತೆಯಲಿ ಬೆಚ್ಚನೆ ಎದೆಯಲಿ
ಬದುಕೇ ಸುಖದಾ ತೀರ

ಕುಡಿದಾ ಮತ್ತಲಿ ಮಾತುಗಳಿದ್ದರೆ
ರಸಿಕತೆ ಮೆರೆದಂತೆ
ಮಾತಲಿ ಸಾಮ್ರಾಜ್ಯ ಕಟ್ಟುವುದಿದ್ದರೆ
ಪಟ್ಟವು ನನಗಂತೆ

ರಾತ್ರಿಯ ಬೆಳಕಿನ ಸುಂದರ ಬಯಲಲಿ
ಕುಡುಕನು ಮೆರೆದಾನು
ಕುನ್ನಿಯೊಡನೆಯೂ ಸಂಭಾಷಿಸುತಲಿ
ಮೆಲ್ಲಗೆ ನಕ್ಕಾನು

ಹೆಂಡವೊಂದಿದ್ದರೆ ಬಡತನ ಸಿರಿತನ
ಒಂದೂ ಭಯವಿಲ್ಲ
ಹೆಂಡದ ರುಚಿಯು ಮೈಮನಮರೆಸುವ
ಗಂಡಿಗೆ ಭಯವಿಲ್ಲ

ಹೆಂಡದ ಬಾಟಲು ಬಗಲೊಳಗಿದ್ದರೆ
ನನಗುಂಟು ನೂರಾರು ಬಾಯಿ
ಹೆಂಡದ ಬಾಟಲು ಬಾಯಲಿ ಇದ್ದರೆ
ನಾನೇ ಒಂದು ಪೀಪಾಯಿ...

★★★

ಶ್ರದ್ಧಾಂಜಲಿ

ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಕನ್ನಡದ ಮೂವರು ಧೀಮಂತ ಲೇಖಕರನ್ನು ಕಳೆದುಕೊಂಡು ಕನ್ನಡಾಂಬೆಯ ಮಡಿಲು ಬರಿದಾಗಿದೆ. ಕನ್ನಡ ಸಾರಸ್ವತ ಲೋಕಕ್ಕೆ ಅತ್ಯಮೂಲ್ಯ ಕೊಡುಗೆಯನ್ನಿತ್ತ ಈ ಮಹನೀಯರಿಗೆ ಅಪರಂಜಿ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾಳೆ.

ಪು.ತಿ. ನರಸಿಂಹಾಚಾರ್: 1905-1998

1933ರಲ್ಲಿ 'ಹಣತೆ' ಕವನ ಸಂಗ್ರಹದಿಂದ ಪ್ರಾರಂಭವಾಗಿ 'ಮಾಂದಳಿರು', 'ಶಾರದಯಾಮಿನಿ', 'ಗಣೇಶ ದರ್ಶನ' ಮುಂತಾದ ಕವನ ಸಂಗ್ರಹಗಳ ಜೊತೆಗೆ 'ಅಹಲ್ಯೆ', 'ಹಂಸ ದಮಯಂತಿ', 'ಗೋಕುಲ ನಿರ್ಗಮನ' ಮುಂತಾದ ನಾಟಕಗಳನ್ನೂ ರಚಿಸಿದ್ದಾರೆ. ಸಂಸ್ಕೃತದಂತೆ ಫ್ರೆಂಚ್ ಭಾಷೆಯಲ್ಲೂ ಪ್ರಾವೀಣ್ಯತೆ ಪಡೆದಿದ್ದ ಪುತಿನ ಅವರಿಗೆ 'ಪಂಪ ಪ್ರಶಸ್ತಿ', ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ 'ಪದ್ಮಶ್ರೀ' ಪ್ರಶಸ್ತಿಗಳ ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕನ್ನಡ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ನೀಡಿ ಗೌರವಿಸಿವೆ.

'ಚದುರಂಗ' 1916-1998

'ಚದುರಂಗ' ಕಾವ್ಯನಾಮದಿಂದ ಪ್ರಖ್ಯಾತರಾಗಿದ್ದ ಎಂ. ಸುಬ್ರಮಣ್ಯರಾಜ ಅರಸ್ ಅವರು ಕಥೆ-ಕಾದಂಬರಿ, ನಾಟಕ, ಚಿತ್ರರಂಗ ಹೀಗೆ ಹಲವು ಮಾಧ್ಯಮಗಳಲ್ಲಿ ಪಳಗಿದವರು. ಅವರ 'ಉಯ್ಯಾಲೆ' 'ಸರ್ವಮಂಗಳ' ಕಾದಂಬರಿಗಳು ಚಲನ ಚಿತ್ರಗಳಾಗಿಯೂ ಯಶಸ್ವಿಯಾಗಿವೆ. ಇತ್ತೀಚೆಗೆ ಅವರ 'ಹೆಜ್ಜಾಲ' ಕಾದಂಬರಿ ಬಿಡುಗಡೆಯಾಗಿತ್ತು. ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ ಅವರದಾಗಿತ್ತು.

'ಸತ್ಯಕಾಮ' 1920-1998

'ಸತ್ಯಕಾಮ' ಕಾವ್ಯ ನಾಮಾಂಕಿತದ ಅನಂತಕೃಷ್ಣ ಷಹಾಪೂರ ಅವರು ತಮ್ಮ ವಿಶಿಷ್ಟ ಶೈಲಿಯ ಬರವಣಿಗೆಯಿಂದ ಖ್ಯಾತರಾದವರು. ಅವರಂತೆ ಪೌರಾಣಿಕ ಕಾದಂಬರಿಗಳನ್ನು ಬರೆಯಬಲ್ಲವರು ಇನ್ನೊಬ್ಬರಿಲ್ಲವೆಂದರೆ ಅಚ್ಚರಿಯಿಲ್ಲ. ಐವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿರುವ ಅವರಿಗೆ ಹೆಸರು ತಂದುಕೊಟ್ಟ ಕೃತಿಗಳೆಂದರೆ 'ರಾಜಪೀಡೆ', 'ವಿಪ್ರಯೋಗ', 'ಕೃಷ್ಣಾರ್ಪಣ', 'ತಣ್ಣಗಿನ ಬೆಂಕಿ', 'ಒಡೆದ ಕನ್ನಡಿ', 'ಮನ್ವಂತರ'... ಅವರ ಮಹತ್ವದ ರಚನೆಗಳಲ್ಲೊಂದಾದ 'ತಂತ್ರಯೋನಿ' ಇತ್ತೀಚೆಗಷ್ಟೆ ಬಿಡುಗಡೆಯಾಗಿತ್ತು. ಸ್ವಾತಂತ್ರ್ಯಯೋಧರೂ ಆಗಿದ್ದ ಸತ್ಯಕಾಮರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿತ್ತು.

ನಿಮ್ಮ ನಮ್ಮಲ್ಲಿ

ಪ್ರೀತಿಯ ಶಿವಕುಮಾರ್ ಸರ್,

ತಡೆದುಕೊಳ್ಳಲು ಸಾಧ್ಯವೇ ಇಲ್ಲ ಎಂಬುದು ಖಂಡಿತವಾದಾಗ ಎದುರು ಸಿಕ್ಕ ಕಾರ್ಡೊಂದರಲ್ಲಿ ಗೀಚುತ್ತಿರುವೆ.


ಮೂರು ಸಮಸ್ಯೆಗಳಲ್ಲಿ ಸಿಲುಕಿ, ಸ್ವಲ್ಪವಾದರೂ ನಗೋಣ ಎಂದು ಅಪರಂಜಿ ಬಿಡಿಸಿದಾಗ 'ಸಾಂತ್ವನ' ಮೊದಲು ಕಣ್ಣಿಗೆ ಬೀಳಬೇಕೆ?

ಈ ಪತ್ರ ಬರೆಯುತ್ತಿರುವಾಗಲೂ ಗಳಗಳಾಂತ ಅಳುತ್ತಿರುವೆ. ಬಿಕ್ಕಳಿಸಿ ಬಿಕ್ಕಳಿಸಿ ಅಳುತ್ತಿರುವೆ. ಈ ಮನುಷ್ಯ ಜಾತಿ ಎಷ್ಟೊಂದು ವಿಚಿತ್ರ! ಅದೆಷ್ಟು ಹೃದಯವಂತಿಕೆ।


ಎಚ್. ಗೋಪಾಲಕೃಷ್ಣರಿಗೆ ಇಲ್ಲಿಂದಲೇ ನಮಸ್ಕರಿಸುವೆ.


ನಿಮ್ಮ

ಬೋಳುವಾರು ಮಹಮದ್ ಕುಂಞ



ಅಮೆರಿಕಾದ ಅಧ್ಯಕ್ಷರ ಮಹತ್ಸಾಧನೆ ಏನು? ಅಂತ ಕೇಳಿದ್ದಕ್ಕೆ ಆ ಹಿಸ್ಟರೀ ಮಿಸ್ಸು ಹೇಗೆ ನಾಚಿ ಕೆಂಪಾದರು ನೋಡ್ದೇನೋ





ಜಿಂಬಾಬ್ವೇ, ಶ್ರೀಲಂಕಾ ಮೇಲೆ
ಸೋತ್ರೇನಂತೇ, ಬಾಂಗ್ಲಾದೇಶದ
ಮೇಲೆ ಎಂದಿಗೂ ಜಯ
ಗೊತ್ತೇನು?

ಹರಿಣಾಕ್ಷೀರು
ಜೊತೆಗಿದ್ದೂ
ಹರಿಣಗಳನ್ನ ಕೊಲ್ಲುಕ್ಕೆ
ಹೇಗೆ ಮನಸ್ಸು ಬಂತೂ
ಅಂತೀನಿ



ನಾವು ನಗುವ ಹಾಗೆ

- ಎಚ್. ಶಿವರಾಂ

1

ದೇಶ ಹೇಗಿದೆ ನೋಡಿ
ನಾವು ಕಟ್ಟಿದ ಹಾಗೆ
ಬದುಕು ಸಾಗಿದೆ ಬನ್ನಿ
ನಾವು ನಗುವ ಹಾಗೇ

2

ಎಲ್ಲರೂ ಮತ ಹಾಕುವುದೇ
ಒಂದಾಗಿ ನಗಲಿಕ್ಕಾಗಿ
ಅಳುತ ಕುಳಿತರೆ ಒಬ್ಬರೇ
ಯಾರೂ ಜತೆಗಿಲ್ಲ ಹೋಗಿ

3

ನಗುವಿನಲ್ಲೂ ನೂರಾರು ಬಗೆ
ಮಗುವಿನ ಮುಗ್ಧನಗೆ
ಮಹಾಮಹಿಮಗ ಸ್ನಿಗ್ಧನಗೆ
ಭಗವದ್ಗೀತೆಯ ಭೋದಕ
ಶ್ರೀ ಕೃಷ್ಣ ಮನಮೋಹಕ ನಗೆ
ವಿಶ್ವ ಸುಂದರಿಯರ ಸೊಬಗು,
ಬಿನ್ನಾಣ ವೈಭವದ ನಗೆ
ರಾಜಕಾರಣಿಯರ ದೇಶಾವರಿ ನಗೆ
ಭ್ರಷ್ಟರ, ದುಷ್ಟರ ವಿಕಟ ನಗೆ
ಸಿಬಿಐಗೆ ಸೆರೆಸಿಕ್ಕವರು
ಹೊಮ್ಮಿಸುವ ಹುಸಿನಗೆ

4

ಮಹಾತ್ಮರಾಗಿ ಪುತಾತ್ಮರಾದ
ಗಾಂಧೀಜಿಯ ಬೊಚ್ಚು ಬಾಯಿ ನಗೆ
ಬಿಚ್ಚು ಮನಸಿನ ನೇರ ನಡೆಗಲವರ
ಹೃತ್ಪೂರ್ವಕ ನಗೆ

5

ಬಡವರ ಬವಣೆಗೆ ದೀನರ ಮೊರೆಗೆ
ಕರುಣಾಳು ದೈನ್ಯವೆತ್ತ ನಗೆ
ಹೀಗೆ ಇನ್ನೆಷ್ಟೋ ಬಗೆ ಬಗೆ
ಹಾಸ್ಯದ ನಗೆ, ಪ್ರಾಯ ಹೆಚ್ಚಿಸೊ ನಗೆ
ಜೀವ ತುಂಬುವ ನಗೆ ಯಾರಿಗೆ ಬೇಕಿಲ್ಲ;
ಎಲ್ಲ ಬಲವಂತದ ನಗೆ ಕೃತಕ-ಕುಹಕ ನಗೆ
ಯಾರಿಗೆ ತಿಳಿದಿಲ್ಲ!

6

ದೇಶ ಹೇಗಿದೆ ನೋಡಿ
ನಾವು ಬೆಳೆಸಿದ ಹಾಗೆ
ದುಡಿಮೆ ದಕ್ಕಿದೆ ಬನ್ನಿ
ನಮ್ಮ ನಿಯತ್ತಿನ ಹಾಗೇ
ಜನ ಹೇಳುತ್ತಾರೆ ಕೇಳಿ
ಕೆಲವೊಮ್ಮೆ ಎಲ್ಲ ಮನಸ್ಸಿನ ಹಾಗೇ
ದಿನ ಬೆಳಗುತ್ತದೆ ನೋಡಿ
ನಾವು ಚಿಂತಿಸುವ ಹಾಗೇ
ಜನ ಬದಲಾಗುತ್ತಲೆ ಇರುತ್ತಾರೆ ಬಿಡಿ
ವ್ಯಥೆ ಮರೆತು ಮತ್ತೆ ನಗುವ ಹಾಗೆ



ಶ್ರೀಮತಿ ಶಾಂತಾ ಮತ್ತು ಶ್ರೀ ಸಿ. ಆರ್. ರಘು

ಇವರ ಸವಿನೆನಪಿಗೆ

ಪೂರ್ಣಿಮಾ ರಘು ಗೌಡ – ಸುಧೀರ್‌ಗೌಡ

ಶ್ರೀಹರಿ ಕದಾಂಬಿ.

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram Bangalore - 560 003. Printed at RAVI GRAPHICS, 62, 4th Cross, SSI Area, Rajajinagar, Bangalore 560 010.
Editor : M. SHIVAKUMAR